**ಸಂಪುಟ:** 06 **ಸಂಚಿಕೆ:** 147 **ಪುಟಗಳು:** 08 **ಭಾನುವಾರ** 09 **ಆಗಸ್ಟ್** 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಕಾರಣವೇನಾದರೂ ಇರಲಿ, ಇವತ್ತಿನ ದಿನವನ್ನು ಪ್ರೀತಿಸಿ. ಇಡೀ ದಿನದ ಕೆಲಸಗಳು ಸಲೀಸಾಗಲಿವೆ.

## ಐದು ರಾಜ್ಯಗಳು ಒಳಗೊಂಡ ಕಾರಾಗೃಹ ಇಲಾಖೆಗಳ ಎಪಿಸಿಎ ಸದಸ್ಯರ ಸಭೆ

• **ಉದಯವಾಹಿನಿ, ಬೆಂಗಳೂರು**

ಕಾರಾಗೃಹಗಳಲ್ಲಿ ಸುಧಾರಣಾ ಚಟುವಟಿಕೆಗಳ ಅನುಷ್ಠಾನದ ಕುರಿತು ಗೃಹ ಸಚಿವಾಲಯ ಮತ್ತು ದಕ್ಷಿಣದ ಎಲ್ಲಾ ರಾಜ್ಯಗಳಿಗೆ ಶಿಫಾರಸುಗಳನ್ನು ಸಲ್ಲಿಸಲು ಕಾರಾಗೃಹ ಮತ್ತು ಸುಧಾರಣಾ ಆಡಳಿತ ಅಕಾಡೆಮಿಯ (ಎಪಿಸಿಎ) ಸದಸ್ಯರ ಮಂಡಳಿಯ ಸಭೆಯಲ್ಲಿ ನಿರ್ಧರಿಸಲಾಯಿತು. ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಪೊಲೀಸ್ ಮಹಾ ನಿರ್ದೇಶಕ ಹಾಗೂ ಎಪಿಸಿಎ ಅಧ್ಯಕ್ಷರಾಗಿರುವ ಅಲೋಕ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಎಪಿಸಿಎ ಸದಸ್ಯರ ಮಂಡಳಿಯ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ದಕ್ಷಿಣದ ಇತರ ರಾಜ್ಯಗಳ ಪೊಲೀಸ್ ಮಹಾ ನಿರ್ದೇಶಕರುಗಳು ಮತ್ತು ಗೃಹ ಸಚಿವಾಲಯದ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಎಪಿಸಿಎ ಮೂಲತಃ ತಮಿಳುನಾಡಿನ ವೆಲ್ಲೂರಿನಲ್ಲಿ ನೆಲೆಗೊಂಡಿರುವ ಸಂಸ್ಥೆಯಾಗಿದ್ದು, ಕರ್ನಾಟಕ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳ ಕಾರಾಗೃಹ ಅಧಿಕಾರಿಗಳಿಗೆ ತರಬೇತಿ ನೀಡುತ್ತಿದೆ. ದಕ್ಷಿಣ ಆಫ್ರಿಕಾ ದೇಶದ ಕಾರಾಗೃಹ ಭೇಟಿಯ ನಂತರ ರಾಜ್ಯದ ಕಾರಾಗೃಹಗಳಲ್ಲಿ ಸುಧಾರಣಾ ಚಟುವಟಿಕೆಗಳ ಅನುಷ್ಠಾನದ ಕುರಿತು ಗೃಹ ಸಚಿವಾಲಯ ಮತ್ತು ದಕ್ಷಿಣದ ಎಲ್ಲಾ ರಾಜ್ಯಗಳಿಗೆ ಶಿಫಾರಸುಗಳನ್ನು ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಕಾರಾಗೃಹ ಸಂಬಂಧಿತ ಸಂಶೋಧನಾ ಕಾರ್ಯಕ್ಕಾಗಿ ಎಪಿಸಿಎಯನ್ನು ಪ್ರಮುಖ ಸಂಸ್ಥೆಯನ್ನಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಯಿತು. ಕಾಎಪಿಸಿಎಯಲ್ಲಿ ದಕ್ಷಿಣ ರಾಜ್ಯದಿಂದ ಮಾತ್ರವಲ್ಲದೇ ದೇಶದ ಇತರ ಭಾಗಗಳಿಂದಲೂ ಕಾರಾಗೃಹ ಅಧಿಕಾರಿಗಳಿಗೆ ತರಬೇತಿಯನ್ನು ನೀಡುವ ಬಗ್ಗೆ ನಿರ್ಧರಿಸಲಾಯಿತು. ದಕ್ಷಿಣ ರಾಜ್ಯಗಳ ಕಾರಾಗೃಹ ಸಂಬಂಧಿತ ಆಡಳಿತವನ್ನು ಸಕ್ರಿಯಗೊಳಿಸಲು ಕಾರಾಗೃಹದ ಒಳಗೆ ಹಾಗೂ ಹೊರಗೆ ಬದಲಾಗುತ್ತಿರುವ ವಿದ್ಯಮಾನಗಳಿಗೆ ಅನುಗುಣವಾಗಿ ತರಬೇತಿಯ ಗುಣಮಟ್ಟವನ್ನು ಸುಧಾರಿಸಬೇಕೆಂದು ಸಭೆಯಲ್ಲಿ ಪುನರುಚ್ಚರಿಸಲಾಯಿತು.

ಮಾತನಾಡಿದ ಅಲೋಕ್ ಕುಮಾರ್, ಕರ್ನಾಟಕ, ಆಂಧ್ರ ಪ್ರದೇಶದಲ್ಲಿ ಕಾರಾಗೃಹ ಇಲಾಖೆ ಹಾಗೂ ಸುಧಾರಣಾ ಸೇವಾ ಇಲಾಖೆ ಎಂಬ ಹೆಸರಿಸಿದೆ. ದೇಶದ ಎಲ್ಲಾ ಕಾರಾಗೃಹ ಇಲಾಖೆಗಳಿಗೂ ಸುಧಾರಣಾ ಸೇವಾ ಇಲಾಖೆ ಎಂದು ಮರು ಸ್ಥಾಪಿಸಬೇಕು.

## ಹೋಟೆಲ್‌ಗಳ ಮೇಲೆ ಮುಂದುವರೆದ ಫುಡ್ ಸೇಫ್ಟಿ ರೇಡ್; 26 ಕಡೆ ದಾಳಿ, 11 ರೆಸ್ಟೋರೆಂಟ್‌ಗಳಿಗೆ ನೋಟಿಸ್

• **ಉದಯವಾಹಿನಿ, ಬೆಂಗಳೂರು**

ನಗರದಲ್ಲಿ ಹೋಟೆಲ್‌ಗಳು ಹಾಗೂ ಜಂಕ್ ಫುಡ್‌ಗಳ ಗುಣಮಟ್ಟದ ಬಗ್ಗೆ ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳು ನಡೆಸುತ್ತಿರುವ ದಾಳಿ ಇಂದು ಕೂಡ ಮುಂದುವರಿದಿದೆ. ಬ್ರಿಗೇಡ್ ರೋಡ್ ಸೇರಿದಂತೆ ನಗರದ ಹಲವು ಕಡೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಕೂಡ ಪ್ರಸಿದ್ಧ ಹೋಟೆಲ್ ಮತ್ತು ರೆಸ್ಟೋರೆಂಟ್ ಸೇರಿದಂತೆ ಹಲವು ಕಡೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಹೋಟೆಲ್‌ಗಳಲ್ಲಿ ಸಿದ್ಧಪಡಿಸಲಾಗುತ್ತಿದ್ದ ಆಹಾರ ಪದಾರ್ಥಗಳ ಪರಿಶೀಲಿಸಲಾಗಿದೆ. ಅನುಮಾನ ಬಂದ ಆಹಾರ ಪದಾರ್ಥಗಳ ಸ್ಯಾಂಪಲ್‌ಗಳನ್ನು ಅಧಿಕಾರಿಗಳು ಸಂಗ್ರಹಿಸಿದ್ದು, ಅವುಗಳನ್ನು ಲ್ಯಾಬ್‌ಗೆ ಕಳುಹಿಸಲು ಸಿದ್ಧತೆ ನಡೆಸಿದ್ದಾರೆ. ಬ್ರಿಗೇಡ್ ರೋಡ್‌ನಲ್ಲಿರುವ ಫೇಮಸ್ ಹೋಟೆಲ್‌ಗಳು ಮತ್ತು ಫಾಸ್ಟ್‌ಫುಟ್ ಸೆಂಟರ್‌ಗಳಲ್ಲೂ ಪರಿಶೀಲನೆ ನಡೆಸಲಾಗಿದೆ. ಐವರು ಅಧಿಕಾರಿಗಳ ತಂಡ ಸ್ಥಳಕ್ಕೆ ತೆರಳಿ ಆಹಾರ ಮತ್ತು ಮಾಂಸದ ಗುಣಮಟ್ಟವನ್ನು ಪರಿಶೀಲಿಸಿದೆ. ಆಹಾರ ಸುರಕ್ಷತಾ ಇಲಾಖೆ ಆಯುಕ್ತ ಶ್ರೀನಿವಾಸ್ ಮಾತನಾಡಿ, ನಿನ್ನೆಯಿಂದಲೇ ನಗರದ ಹೋಟೆಲ್‌ಗಳ ಮೇಲೆ ದಾಳಿ ನಡೆಸಲಾಗುತ್ತಿದೆ .

## ಸೋಮವಾರದೊಳಗೆ ಖಾತೆ ಹಂಚಿಕೆ ಅಂತಿಮ

• **ಉದಯವಾಹಿನಿ, ಬೆಂಗಳೂರು**

ಸಚಿವ ಸಂಪುಟ ವಿಸ್ತರಣೆಯ ಬಳಿಕ ಸಚಿವರಿಗೆ ಖಾತೆ ಹಂಚಿಕೆ ವಿಳಂಬವಾಗಿರುವ ಕುರಿತು ಪ್ರತಿಕ್ರಿಯಿಸಿರುವ ಸಚಿವ ಸತೀಶ್ ಜಾರಕಿಹೊಳಿ, ಸೋಮವಾರದೊಳಗೆ ಖಾತೆ ಹಂಚಿಕೆ ಅಂತಿಮಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ. ಇಂದು ಅಥವಾ ನಾಳೆಯೊಳಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಈ ಬಗ್ಗೆ ಕ್ರಮ ಕೈಗೊಳ್ಳಲಿದ್ದಾರೆ. ಮುಖ್ಯಮಂತ್ರಿ ಇಂದು ದೆಹಲಿಗೆ ತೆರಳುವ ಸಾಧ್ಯತೆಯಿದ್ದು, ಸೋಮವಾರದೊಳಗೆ ಸಚಿವರಿಗೆ ಖಾತೆ ಹಂಚಿಕೆ ಆಗಬಹುದು. ಸಂಪುಟದಲ್ಲಿ ಹಳಬರು ಹಾಗೂ ಆಡಳಿತದ ಬಗ್ಗೆ ಜ್ಞಾನ ಹೊಂದಿರುವವರು ಇದ್ದಾರೆ. ಹೀಗಾಗಿ ಖಾತೆ ಹಂಚಿಕೆ ವಿಚಾರದಲ್ಲಿ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.ಸಂಪುಟದಿಂದ ಸಚಿವರನ್ನು ಕೈ ಬಿಡುವ ವಿಚಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

ಈ ಕುರಿತು ಈಗಾಗಲೇ ಎಲ್ಲರೂ ಮಾತನಾಡಿದ್ದಾರೆ. ಎಐಸಿಸಿ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕೂಡ ಹೇಳಿಕೆ ನೀಡಿದ್ದಾರೆ. ಅಸಮಾಧಾನಗೊಂಡಿರುವವರ ಮನೆಗೆ ಮುಖ್ಯಮಂತ್ರಿ ತೆರಳಿದ್ದಾರೆ. ಕೆಪಿಸಿಸಿ ಅಧ್ಯಕ್ಷರೂ ಭೇಟಿ ನೀಡಿದ್ದಾರೆ.

## ಮಹಿಳೆಯರಿಗೆ ತಕ್ಷಣ ಕಾನೂನು ನೆರವು ಒದಗಿಸಬೇಕು: ನ್ಯಾ ಬಿ.ವಿ. ನಾಗರತ್ನ

• **ಉದಯವಾಹಿನಿ, ಬೆಂಗಳೂರು**

ಮಹಿಳೆಯರಿಗೆ ಯಾವುದೇ ಘಟನೆ ಸಂಭವಿಸಿದ ತಕ್ಷಣವೇ ಕಾನೂನು ನೆರವು ದೊರೆಯುವಂತಿರಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಪ್ರತಿಪಾದಿಸಿದ್ದಾರೆ. ಇದೇ ವೇಳೆ, ನಿಯಮಿತ ಮೊದಲ ಮೇಲ್ಮನವಿಗಳನ್ನು ವಿಚಾರಿಸುವ ಕರ್ನಾಟಕ ಹೈಕೋರ್ಟ್ನ ಅಧಿಕಾರವನ್ನು ಮೊಟಕುಗೊಳಿಸಿರುವ ಇತ್ತೀಚಿನ ತಿದ್ದುಪಡಿಗಳ ಬಗ್ಗೆಯೂ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಮಹಿಳಾ ಆಯೋಗವು ಕರ್ನಾಟಕ ಹೈಕೋರ್ಟ್ ಮತ್ತು ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಹಯೋಗದಲ್ಲಿ ಆಯೋಜಿಸಿರುವ ಮಹಿಳೆಯರಿಗೆ ನ್ಯಾಯ ವಿಷಯದ ಎರಡು ದಿನಗಳ ದಕ್ಷಿಣ ವಲಯ ಪ್ರಾದೇಶಿಕ ಸಮೇಳನವನ್ನು ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು.

# ದೆಹಲಿಯಲ್ಲಿ ಮೋದಿ ಮಾತು

# ಬದಲಾಗುತ್ತಿರುವ ಜಗತ್ತು



• **ಉದಯವಾಹಿನಿ, ನವದೆಹಲಿ**

ತಂತ್ರಜ್ಞಾನ, ಕೈಗಾರಿಕೆ ಮತ್ತು ಔದ್ಯೋಗಿಕ ಜಗತ್ತು ವಿಕಸಗೊಳ್ಳುತ್ತಿದ್ದು, ಯಾರು ನಿರಂತರ ಕಲಿಕೆಯಲ್ಲಿ ತೊಡಗುತ್ತಾರೋ ಅವರು ಜೀವನದಲ್ಲಿ ಯಶಸ್ವಿಯಾಗುತ್ತಾರೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. ಭಾರತೀಯ ತಾಂತ್ರಿಕ ಸಂಸ್ಥೆ (ಐಐಟಿ) ದೆಹಲಿಯ 57ನೇ ಘಟಿಕೋತ್ಸವದಲ್ಲಿ ಮಾತನಾಡಿದ ಪ್ರಧಾನಿ, ಜಾಗತಿಕ ಅಧಿಕಾರದ ಸಮತೋಲನವು ಕ್ಷಣಕ್ಷಣಕ್ಕೂ ಬದಲಾಗುತ್ತಿದೆ. ತಂತ್ರಜ್ಞಾನ ವಿಕಸನಗೊಳ್ಳುತ್ತಿರುವ ವೇಗವೇ ಇದರ ಹಿಂದಿರುವ ಅತಿದೊಡ್ಡ ಶಕ್ತಿಯಾಗಿದೆ ಎಂದರು.

ಜಾಗತಿಕ ಕಾರ್ಯತಂತ್ರದ ಸಮೀಕರಣವು ವೇಗವಾಗಿ ಬದಲಾಗುತ್ತಿದೆ. ಮುಖ್ಯವಾಗಿ ತಾಂತ್ರಿಕ ಪ್ರಗತಿಯ ವೇಗದಿಂದಾಗಿ, ಜಾಗತಿಕ ಅಧಿಕಾರದ ಸಮತೋಲನವು ಕ್ಷಣಕ್ಷಣಕ್ಕೂ ಬದಲಾಗುತ್ತಿದೆ. ಮುಂದಿನ 20 ಮತ್ತು 30 ವರ್ಷದಲ್ಲಿ ಜಗತ್ತು ಏನನ್ನು ಕಾಣಲಿದೆ ಎಂಬುದರ ಕುರಿತು ಯಾರು ಹೇಳಲು ಸಾಧ್ಯವಿಲ್ಲ. ಜಗತ್ತು, ತಂತ್ರಜ್ಞಾನ, ಕೈಗಾರಿಕೆಗಳು ಮತ್ತು ವೃತ್ತಿಗಳು ಇವೆಲ್ಲವೂ ಬದಲಾಗುತ್ತಾ ಹೋಗುತ್ತವೆ. ಆದರೆ ಇವೆಲ್ಲದರ ನಡುವೆಯೂ ನಿರಂತರ ಕಲಿಕೆಯು ಯಶಸ್ಸಿನತ್ತ ಕರೆದೊಯ್ಯುತ್ತದೆ ಎಂದು ತಿಳಿಸಿದರು.

ಈ ಹಿಂದೆ ಕಡೆಯದಾಗಿ ತಾವು ಘಟಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದರ ಕುರಿತು ಮಾತನಾಡಿದ ಅವರು, ಕಳೆದ ಬಾರಿ ನಾನು ಘಟಿಕೋತ್ಸವಕ್ಕೆ ಹಾಜರಾದಾಗ ಇಡೀ ಜಗತ್ತು ಕೋವಿಡ್ ಅವಧಿಯಲ್ಲಿತ್ತು. ನಾವು ವರ್ಚುಯಲ್ ಆಗಿ ಕಾರ್ಯಕ್ರಮಕ್ಕೆ ಹಾಜರಾಗಿದ್ದೆ.

ಇಂದು ಎಲ್ಲಾ ಯುವಜನರ ನಡುವೆ ಇದ್ದೇನೆ ಎಂದರು. ಯುವಜನತೆ ಪದವಿ ಪಡೆಯುತ್ತಿರುವ ಬಗ್ಗೆ ಹೆಮ್ಮೆಯಾಗುತ್ತಿದೆ. ನಿಮ್ಮ ಕುಟುಂಬದಂತೆ ನಾನು ಕೂಡ ಹೆಮ್ಮೆ ಪಡುತ್ತಿದ್ದೇನೆ ಎಂದು ಪ್ರಧಾನಿ ತಿಳಿಸಿದರು. ನೀವು ಇದೀಗ ನಿಮ್ಮ ಜೀವನದಲ್ಲಿ ಸ್ಮರಣೀಯ ಕ್ಷಣವನ್ನು ಕಳೆಯುತ್ತಿದ್ದೀರಿ. ಈ ಕ್ಷಣದಲ್ಲಿ ಭಾಗಿಯಾಗುವುದು ಉತ್ಸಾಹ, ಕನಸು ಮತ್ತು ಭಾವನೆಗಳಿಂದ ತುಂಬಿದೆ. ಐಐಟಿ ದೆಹಲಿ ಕ್ಯಾಂಪಸ್‌ಗೆ ಬರುವುದು ನಿಮ್ಮೆಲ್ಲರ ಅನುಭವವನ್ನು ಹಂಚಿಕೊಳ್ಳುವುದು ವಿಶೇಷವಾಗಿದೆ ಎಂದರು.

ನೀವು ಇದೀಗ ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುವ ಹೊಸ ಸನ್ನಿವೇಶದಲ್ಲಿದ್ದೀರಿ. ಇದನ್ನು ನೀವು ಐಐಟಿ ದೆಹಲಿಯಲ್ಲಿ ಕಲಿತ್ತಿದ್ದೀರಿ. ಭಾರತವು ಈಗ ಪ್ರತಿ ವಲಯದಲ್ಲಿ ಸ್ವಾವಲಂಬಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ದೇಶದಲ್ಲಿ ಎಲ್ಲಾ ವಲಯದಲ್ಲಿ ನಮ್ಮ ಯುವಜನರನ್ನು ಕಾಣಬಹುದಾಗಿದೆ ಎಂದು ಮೋದಿ ತಿಳಿಸಿದರು.

ಕಾರ್ಯಕ್ರಮದಲ್ಲಿ 587 ಪಿಎಚ್‌ಡಿ ಸ್ಕಾಲರ್ ಸೇರಿದಂತೆ 3ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ನೀಡಲಾಯಿತು. ನೀವು ಇದೀಗ ನಿಮ್ಮ ಜೀವನದಲ್ಲಿ ಸ್ಮರಣೀಯ ಕ್ಷಣವನ್ನು ಇದೇ ವೇಳೆ ಪ್ರಧಾನಿ ಮೋದಿ ಅವರು ಸೋನಿಪತ್ ಕ್ಯಾಂಪಸ್‌ನಲ್ಲಿ ಕೃತಕ ಬುದ್ಧಿಮತ್ತೆ ಚಾಲಿತ ಉನ್ನತ-ಕಾರ್ಯಕ್ಷಮತೆಯ ಸೂಪರ್‌ಕಂಪ್ಯೂಟಿಂಗ್ ಸೌಲಭ್ಯವಾದ ಪರಮ್ ಪ್ರಜ್ಞಾ' ಅನ್ನು ವರ್ಚುವಲ್ ಮೂಲಕ ಉದ್ಘಾಟಿಸಿದರು.

### ಪ್ರಧಾನಿ ಮೋದಿ ಮೊದಲ ಸಂಭಾಷಣೆ

ನವದೆಹಲಿಯಲ್ಲಿ ನಡೆದ ಸಿಜೆಪಿ ಪ್ರತಿಭಟನೆಯ ನಂತರ ಪ್ರಧಾನಿ ಮೋದಿಯವರ ಮೊದಲ ಸಾರ್ವಜನಿಕ ಭಾಷಣ ಇದಾಗಿದೆ. ಸಿಜೆಪಿ ಪ್ರತಿಭಟನೆಯ ನಂತರ ಇದು ಅವರ ಮೊದಲ ಸಾರ್ವಜನಿಕ ಕಾರ್ಯಕ್ರಮವಾಗಿತ್ತು. ಶನಿವಾರ ಐಐಟಿ ದೆಹಲಿಯ ಘಟಿಕೋತ್ಸವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯುವ ಪೀಳಿಗೆಯ ಸಾಮರ್ಥ್ಯ ಮತ್ತು ಶಕ್ತಿಯ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. 'ಅಭಿವೃದ್ಧಿ ಹೊಂದಿದ ಭಾರತ'ದತ್ತ ದೇಶದ ಪ್ರಯಾಣದಲ್ಲಿ ಯುವಕರು ಅಗತ್ಯವಿದೆ ಎಂದು ಅವರು ಹೇಳಿದರು.



### ಬಲ ತುಂಬುವ ಯುವಶಕ್ತಿ

ಕಳೆದ ಕೆಲವು ವರ್ಷಗಳಿಂದ ಭಾರತವು ತಂತ್ರಜ್ಞಾನ ಆಧಾರಿತ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಐಐಟಿಗಳಂತಹ ಪ್ರತಿಷ್ಠಿತ ಸಂಸ್ಥೆಗಳು ಈ ಅಭಿಯಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಭಾಷಣದಲ್ಲಿ ಯುವ ಇಂಜಿನಿಯರ್‌ಗಳು ಮತ್ತು ಸಂಶೋಧಕರು 'ಆತ್ಮನಿರ್ಭರ ಭಾರತ' ಮತ್ತು 'ವಿಕಸಿತ ಭಾರತ 2047' ಪರಿಕಲ್ಪನೆಯನ್ನು ನನಸಾಗಿಸಲು ಹೇಗೆ ಕೊಡುಗೆ ನೀಡಬಹುದು ಎಂಬುದರ ಕುರಿತು ಮಹತ್ವದ ಸಂದೇಶ ನೀಡುವ ನಿರೀಕ್ಷೆಯಿದೆ. ಐಐಟಿ ದೆಹಲಿಯ ನಿರ್ದೇಶಕ ಪ್ರೊ. ರಂಗನ್ ಬ್ಯಾನರ್ಜಿ ಹಾಗೂ ಕೇಂದ್ರ ಶಿಕ್ಷಣ ಸಚಿವರು ಸೇರಿದಂತೆ ಪ್ರಮುಖ ಗಣ್ಯರು, ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

ಪರಮ್ ಪ್ರಜ್ಞಾ ಸೂಪರ್ ಕಂಪ್ಯೂಟರ್ ಆರಂಭವಾಗುವುದರೊಂದಿಗೆ ಐಐಟಿ ದೆಹಲಿಯು ಜಾಗತಿಕ ಸಂಶೋಧನಾ ನಕ್ಷೆಯಲ್ಲಿ ತನ್ನ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಳ್ಳಲಿದೆ.

### ಬ್ಲೂಕ್ರಾಫ್ಟ್ ಬ್ರಾಂಡ್ ಮೋದಿ ನಿರೂಪಣೆಯ ಹಿಂದಿರುವ ಕಾರ್ಖಾನೆ

2025 ಸೆಪ್ಟೆಂಬರ್ 24ರಂದು, ಲಡಾಖ್‌ಗೆ ರಾಜ್ಯದ ಸ್ಥಾನಮಾನ, ಉದ್ಯೋಗಾವಕಾಶಗಳು ಮತ್ತು ಸೂಕ್ಷ್ಮ ಪರಿಸರಕ್ಕೆ ಸಾಂವಿಧಾನಿಕ ರಕ್ಷಣೆ ನೀಡಬೇಕೆಂದು ಒತ್ತಾಯಿಸಿ ಸಾವಿರಾರು ಜನರು ಲೇಹ್‌ನ ಬೀದಿಗಿಳಿದಿದ್ದರು. ಮುಂದಿನ 72 ಗಂಟೆಗಳಲ್ಲಿ, ಈ ಮೂಲ ವಿಷಯವೇ ಮಾಯವಾಗಿ ಹೋಯಿತು. ನ್ಯೂ ಇಂಡಿಯಾ ಜಂಕ್ಷನ್' ಎಂಬ ವೇದಿಕೆಯಲ್ಲಿ ರಿಚಾ ದ್ವಿವೇದಿ ಎಂಬ ನಿರೂಪಕಿ ಕಾಣಿಸಿಕೊಂಡು, ಹೋರಾಟಗಾರ ಸೋನಮ್ ವಾಂಗ್ಚುಕ್ ಅವರು ಅರಬ್ ಸ್ಪ್ರಿಂಗ್ ಮತ್ತು ನೇಪಾಳದ ಜೆನ್ ಝೀ' ಪ್ರತಿಭಟನೆಗಳನ್ನು ಉಲ್ಲೇಖಿಸಿ ಜನರನ್ನು ಎತ್ತಿಕಟ್ಟಿದ್ದಾರೆ. ಇದರಿಂದಾಗಿ ಜನಸಮೂಹ ಹಿಂಸಾಚಾರಕ್ಕೆ ತಿರುಗಿದೆ. ಕಾಂಗ್ರೆಸ್ ಕೌನ್ಸಿಲರ್‌ಗಳು ಪ್ರತಿಭಟನಾಕಾರರನ್ನು ಕಲ್ಲು ತೂರಾಟಕ್ಕೆ ಮತ್ತು ಬಂದ್‌ಗೆ ಪ್ರಚೋದಿಸುತ್ತಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ವಾದಿಸಿದರು. ಅದೇ ಸಮಯದಲ್ಲಿ ಓಜಸ್ ಭಂಡಾರಿ ಎಂಬ ಮತ್ತೊಬ್ಬ ನಿರೂಪಕ ವಾಂಗ್ಚುಕ್ ಅವರನ್ನು ದೇಶದ್ರೋಹಿ ಎಂದು ಕರೆದು, ಪಹಲ್ಗಾಮ್ ದಾಳಿಗೆ ಕೆಲ ಸಮಯದ ಮುನ್ನ ಅವರು ಇಸ್ಲಾಮಾಬಾದ್‌ನಲ್ಲಿದ್ದರು ಎಂದು ಹೇಳುವ ವಿಡಿಯೋಗಳನ್ನು ಹಂಚಿಕೊಂಡರು.

- ಜಗತ್ತು ಬದಲಾಗುತ್ತಿದೆ, ನಿರಂತರ ಕಲಿಕೆಯಿಂದ ಮಾತ್ರ ಯಶಸ್ಸು
- ಐಐಟಿ ದೆಹಲಿಯಲ್ಲಿ ಪ್ರಧಾನಿ ಮೋದಿ
- 3,000 ಯುವ ಸಾಧಕರಿಗೆ ಪದವಿ ಪ್ರದಾನ;'ಪರಮ್ ಪ್ರಜ್ಞಾ'ಸೂಪರ್ ಕಂಪ್ಯೂಟರ್ ದೇಶಕ್ಕೆ ಸಮರ್ಪಣೆ
- ನರೇಂದ್ರ ಮೋದಿ-ಸುಖಬೀರ್ ಬಾದಲ್ ಭೇಟಿ ಬೆನ್ನಲ್ಲೇ ಕೇಂದ್ರದ ಮಸೂದೆಗಳಿಗೆ ಎಸ್‌ಎಡಿ ಬೆಂಬಲ
- ಬಿಜೆಪಿ ಜೊತೆ ಮೈತ್ರಿಗೆ ಸಜ್ಜಾಯ್ತಾ ಅಕಾಲಿದಳ

### ಘಟಿಕೋತ್ಸವ ಸಮಾರಂಭ

**1** ಮತ್ತೆ ಎನ್‌ಡಿಎ ತೆಕ್ಕೆಗೆ ಬೀಳಲಿದೆ ಶಿರೋಮಣಿ ಅಕಾಲಿ ದಳ.

**2** ಪ್ರಧಾನಿ ಮೋದಿ-ಸುಖಬೀರ್ ಬಾದಲ್ ಮಹತ್ವದ ಸಭೆ.

**3** ಮಹಿಳಾ ಮೀಸಲಾತಿ ಮತ್ತು ಡಿಲಿಮಿಟೇಶನ್ ಬಿಲ್‌ಗೆ ಅಕಾಲಿ ದಳ ಬೆಂಬಲ

### ನಾವು ನಿಮ್ಮನ್ನು ನಂಬುತ್ತೇವೆ

ನಾವು ನಿಮ್ಮನ್ನು ನಂಬುತ್ತೇವೆ. ದೇಶಕ್ಕೆ ನಿಮ್ಮ ಅವಶ್ಯಕತೆ ಇದೆ ಎಂದು ಪ್ರಧಾನಿ ಮೋದಿ ಹೇಳಿದರು. ಪ್ರತಿ ಪೀಳಿಗೆಗೂ ದೇಶದ ಬಗ್ಗೆ ಒಂದು ಜವಾಬ್ದಾರಿ ಇದೆ ಮತ್ತು ಯುವಕರ ಗುರಿಗಳು ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಒಳಗೊಂಡಿರಬೇಕು ಎಂದು ಅವರು ಹೇಳಿದರು. ಪ್ರತಿಯೊಂದು ಪೀಳಿಗೆಯೂ ತನ್ನ ಕಾಲದ ನಿರ್ದಿಷ್ಟ ಸವಾಲುಗಳನ್ನು ಎದುರಿಸುತ್ತದೆ ಮತ್ತು ದೇಶದ ಬಗ್ಗೆ ತನ್ನ ಜವಾಬ್ದಾರಿಯನ್ನು ಪೂರೈಸಬೇಕು ಎಂದು ನಿಮಗೆಲ್ಲರಿಗೂ ತಿಳಿದಿದೆ. ಮುಂದಿನ 30 ರಿಂದ 35 ವರ್ಷಗಳಲ್ಲಿ ನೀವು ಏನೇ ಮಾಡಿದರೂ ಅದು 'ಅಭಿವೃದ್ಧಿ ಹೊಂದಿದ ಭಾರತ'ದತ್ತ ನಮ್ಮ ಪ್ರಯಾಣದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ, ನೀವು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವು ದೇಶಕ್ಕೆ ಹೇಗೆ ಪ್ರಯೋಜನವನ್ನು ನೀಡುತ್ತದೆ ಎಂಬುದರ ಆಧಾರದ ಮೇಲೆ ಇರಬೇಕು? ಅದು ದೇಶದ ಅಗತ್ಯಗಳನ್ನು ಪೂರೈಸುತ್ತದೆ.

## ಬಿಜೆಪಿ - ಜೆಡಿಎಸ್ ಸಮನ್ವಯತೆಗಾಗಿ ಮಹತ್ವದ ಸಭೆ: ಟೌನ್‌ಶಿಪ್ ವಿರುದ್ಧ ಜಂಟಿ ಹೋರಾಟದ ಬಗ್ಗೆ ಚರ್ಚೆ

• **ಉದಯವಾಹಿನಿ, ಬೆಂಗಳೂರು**

ಎನ್‌ಡಿಎ ಮೈತ್ರಿಕೂಟದ ಅಂಗ ಪಕ್ಷಗಳಾಗಿರುವ ಬಿಜೆಪಿ ಮತ್ತು ಜೆಡಿಎಸ್ ನಡುವೆ ಹೆಚ್ಚು ಸಮನ್ವಯತೆ ಸಾಧಿಸಲು ಸಮನ್ವಯ ಸಮಿತಿ ರಚನೆ ಕುರಿತಂತೆ ಎರಡೂ ಪಕ್ಷಗಳಲ್ಲಿ ಒಮ್ಮತ ಮೂಡಿದೆ. ಲೋಕಸಭೆ ಚುನಾವಣೆ ಬಳಿಕ ಎರಡೂ ಪಕ್ಷಗಳ ನಡುವೆ ಹೊಂದಾಣಿಕೆ ಕೊರತೆ ಇರುವುದನ್ನು ಮನಗಂಡ ನಾಯಕರುಗಳು ಸಮನ್ವಯ ಸಮಿತಿ ರಚನೆಯ ಅಗತ್ಯತೆಯನ್ನು ಪ್ರತಿಪಾದಿಸಿದ್ದು, ಈಗ ವೇದಿಕೆ ಸಿದ್ಧವಾಗಿದೆ.

ಸಮನ್ವಯ ಸಮಿತಿಗೆ ಅಂತಿಮ ರೂಪ ನೀಡಲಾಗುತ್ತದೆ. ಆ.13ರಿಂದ ಆರಂಭವಾಗುವ ಮಳೆಗಾಲದ ಅಧಿವೇಶನದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಎರಡೂ ಪಕ್ಷಗಳು ಒಟ್ಟಾಗಿ ಹೋರಾಟ ನಡೆಸುವುದೂ ಸೇರಿದಂತೆ, ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಲಾಗುತ್ತದೆ. ಪ್ರಮುಖವಾಗಿ ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಪಾದಯಾತ್ರೆ ನಡೆಸುವ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ಎರಡೂ ಪಕ್ಷಗಳ ಉನ್ನತ ಮೂಲಗಳು ತಿಳಿಸಿವೆ. ಜೆಡಿಎಸ್ ನಾಯಕ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ಬಿಜೆಪಿ ಶಾಸಕಾಂಗ ಪಕ್ಷದ ನಾಯಕ, ಪ್ರತಿಪಕ್ಷ ಮುಖಂಡ ಆರ್.ಅಶೋಕ್ ಸಭೆಯ ನೇತೃತ್ವ ವಹಿಸಲಿದ್ದಾರೆ.

ಟೌನ್‌ಶಿಪ್ ಯೋಜನೆ ವಿರುದ್ಧ ಈ ಮೊದಲು ಬಿಜೆಪಿ ಪಾದಯಾತ್ರೆ ನಡೆಸುವುದಾಗಿ ಘೋಷಣೆ ಮಾಡಿತ್ತು. ಇದರ ಬೆನ್ನಲ್ಲೇ ಜೆಡಿಎಸ್ ಸಹ ಪಾದಯಾತ್ರೆ ನಡೆಸುವುದಾಗಿ ದಿನಾಂಕ ಘೋಷಿಸಿತ್ತು. ಎನ್‌ಡಿಎ ಮೈತ್ರಿಪಕ್ಷಗಳು ಪ್ರತ್ಯೇಕ ಪಾದಯಾತ್ರೆ ನಡೆಸುವುದರ ಬಗ್ಗೆ ಪ್ರಕಟಿಸಿರುವುದು ಉಭಯ ಪಕ್ಷಗಳ ವೇದಿಕೆಯಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು. ಬಳಿಕ ಬಿಜೆಪಿ ಮತ್ತು ಜೆಡಿಎಸ್ ನಾಯಕರುಗಳು ಒಟ್ಟಿಗೆ ಕುಳಿತು ಸಮಾಲೋಚನೆ ನಡೆಸಿ ಪ್ರತ್ಯೇಕ ಹೋರಾಟದಿಂದ ಕಾರ್ಯಕರ್ತರಿಗೆ ತಪ್ಪು ಸಂದೇಶ ನೀಡಿದಂತಾಗುತ್ತದೆ.



ಒಟ್ಟಿಗೆ ಹೋರಾಟ ನಡೆಸುವ ಬಗ್ಗೆ ತೀರ್ಮಾನ ತಗೆದುಕೊಳ್ಳುವ ಅಗತ್ಯವಿದೆ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರನ್ನು ಇತ್ತೀಚೆಗೆ ಭೇಟಿ ಮಾಡಿದ ಬಿಜೆಪಿ ನಾಯಕರಾದ ಆರ್.ಅಶೋಕ್, ಸಂಸದರಾದ ಬಸವರಾಜ ಬೊಮ್ಮಾಯಿ ಹಾಗೂ ಪಿ.ಸಿ.ಮೋಹನ್ ಅವರು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಸಮನ್ವಯತೆ, ಬಿಡದಿ ಟೌನ್‌ಶಿಪ್ ಯೋಜನೆ ವಿರುದ್ಧ ಜಂಟಿ ಹೋರಾಟದ ಕುರಿತಂತೆ ಚರ್ಚೆ ನಡೆಸಿದ್ದರು. ಸಭೆ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದ ಆರ್.ಅಶೋಕ್, ಬಿಡದಿ ಟೌನ್‌ಶಿಪ್ ಯೋಜನೆ ವಿರುದ್ಧ ಭಾರತೀಯ ಜನತಾ ಪಕ್ಷ ಹಾಗೂ ಜಾತ್ಯಾತೀತ ಜನತಾದಳ ಜಂಟಿಯಾಗಿ ವಿಧಾನಸಭೆಯಲ್ಲಿ ಹೋರಾಟ ನಡೆಸಲಿವೆ. ಒಟ್ಟಿಗೆ ಪಾದಯಾತ್ರೆ ನಡೆಸುವ ಕುರಿತಂತೆ ನಡೆಯುವ ಎರಡೂ ಪಕ್ಷಗಳ ಮುಖಂಡರ ಸಭೆಯಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಸಿದ್ದರು.

## ಗ್ಯಾಸ್ ಸಿಲಿಂಡರ್ ಬಳಸುವವರಿಗೆ ಹೊಸ ರೂಲ್ಸ್

• **ಉದಯವಾಹಿನಿ, ಬೆಂಗಳೂರು**

ಆಗಸ್ಟ್ 15ರೊಳಗೆ e-KYC ಪೂರ್ಣಗೊಳಿಸುವಂತೆ ಗ್ಯಾಸ್ ಸಿಲಿಂಡರ್ ಗ್ರಾಹಕರಿಗೆ ಸೂಚನೆ ನೀಡಲಾಗಿದೆ. ಗೃಹ ಬಳಕೆಯ ಐಕಲು ಸಂಪರ್ಕ ಹೊಂದಿರುವ ಪ್ರತಿಯೊಬ್ಬ ಗ್ರಾಹಕರೂ e-KYC ಪೂರ್ಣಗೊಳಿಸಿಕೊಳ್ಳುವಂತೆ ತೈಲ ಕಂಪನಿಗಳು ಹಾಗೂ ಗ್ಯಾಸ್ ವಿತರಕರು ಮನವಿ ಮಾಡುತ್ತಿದ್ದಾರೆ. ಗ್ರಾಹಕರ ಮಾಹಿತಿ ಪರಿಶೀಲನೆ, ದಾಖಲೆಗಳ ಅಪ್‌ಡೇಟ್, ನಿಜವಾದ ಫಲಾನುಭವಿಗಳನ್ನು ಗುರುತಿಸುವ ಉದ್ದೇಶದಿಂದ e-KYC ಪ್ರಕ್ರಿಯೆ ನಡೆಸಲಾಗ್ತಿದೆ. ಆದ್ರೆ e-KYC ಮಾಡಿಸದಿದ್ರೆ ಗೃಹ ಬಳಕೆಯ ಸಿಲಿಂಡರ್ ಸಿಗೋದಿಲ್ಲ. ವಾಣಿಜ್ಯ ದರದಲ್ಲಿ ಸಿಲಿಂಡರ್ ಖರೀದಿಸಬೇಕಾಗುತ್ತೆ. 2108 ರೂಪಾಯಿ ಕೊಟ್ಟು ಕಮರ್ಷಿಯಲ್ ಸಿಲಿಂಡರ್ ಖರೀದಿಸಬೇಕಾಗುತ್ತೆ ಅಂತ ಬೆಂಗಳೂರಿನ ಗ್ಯಾಸ್ ವಿತರಕರು ಮನವಿ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಸ್ಪಷ್ಟನೆ ಪ್ರಕಾರ, e-KYC ಪ್ರಕ್ರಿಯೆ ಬಗ್ಗೆ ಮಾಹಿತಿ ಪಡೆದು ಗ್ರಾಹಕರು ಪರಿಶೀಲಿಸಿಕೊಳ್ಳಬೇಕು. ಅಧಿಕೃತ ಮಾಹಿತಿ ಆಧರಿಸಿಯೇ ಮುಂದಿನ ಕ್ರಮ ಕೈಗೊಳ್ಳಬೇಕು. ಹಾಗಾಗಿ ಕೊನೆಯ ಕ್ಷಣದವರೆಗೆ ಕಾಯದೇ ಹತ್ತಿರದ ಗ್ಯಾಸ್ ಏಜೆನ್ಸಿಗೆ ಭೇಟಿ ನೀಡಿ e-KYC ಸ್ಟೇಟಸ್ ಪರಿಶೀಲಿಸಿಕೊಳ್ಳಬೇಕಿದೆ. ಅಥವಾ ಸಂಬಂಧಪಟ್ಟ ಅಧಿಕೃತ ವ್ಯವಸ್ಥೆಯ ಮೂಲಕ e-KYC ಪೂರ್ಣಗೊಳಿಸಬೇಕು. ಗ್ಯಾಸ್ ಸಂಪರ್ಕ ನಿಮ್ಮ ಹೆಸರಲ್ಲಿದ್ರೆ, e-KYC ಆಗಿದೆಯಾ ಇಲ್ವಾ ಅನ್ನೋದನ್ನ ಒಮ್ಮೆ ಚೆಕ್ ಮಾಡಿಕೊಳ್ಳಬೇಕು. e-KYC ಅಗತ್ಯವಿದ್ದರೆ ಕೂಡಲೇ ಪೂರ್ಣಗೊಳಿಸಿ. ಮುಂದೆ ಸಿಲಿಂಡರ್ ಪಡೆಯುವಾಗ ಯಾವುದೇ ಸಮಸ್ಯೆ ಆಗದಂತೆ ಎಚ್ಚರ ವಹಿಸಿ ಅನ್ನೋದು ತೈಲ ಕಂಪನಿಗಳು ಹಾಗೂ ಗ್ಯಾಸ್ ವಿತರಕರ ಮನವಿಯಾಗಿದೆ. ನೀವು ದೀರ್ಘಕಾಲದವರೆಗೆ e-KYC ಅನ್ನು ಪೂರ್ಣಗೊಳಿಸದಿದ್ದರೆ, ನಿಮ್ಮ ಗ್ಯಾಸ್ ಸಂಪರ್ಕವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಬಹುದು ಅಥವಾ ನಿಷ್ಕ್ರಿಯಗೊಳಿಸಬಹುದು.

ನೀವು ಗ್ಯಾಸ್ ಏಜೆನ್ಸಿಗಳಿಗೆ ಭೇಟಿ ನೀಡುವ ಅಗತ್ಯವಿಲ್ಲ. ಮೊಬೈಲ್ ಅಪ್ಲಿಕೇಶನ್ ಮೂಲಕ ನೀವು ಮನೆಯಿಂದಲೇ ಕೆಲವೇ ನಿಮಿಷಗಳಲ್ಲಿ ಇ-ಕೆವೈಸಿಯನ್ನು ಪೂರ್ಣಗೊಳಿಸಬಹುದು. ನೀವು ಗ್ಯಾಸ್ ಹೊಂದಿರುವ ಕಂಪನಿಯ ಅಧಿಕೃತ ಮೊಬೈಲ್ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಿ (ಉದಾ. ಇಂಡೇನ್, ಭಾರತ್ ಗ್ಯಾಸ್, ಅಥವಾ ಗ್ಯಾಸ್). ನಿಮ್ಮ ಗ್ಯಾಸ್ ಸಂಪರ್ಕಕ್ಕೆ ಲಿಂಕ್ ಮಾಡಲಾದ ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ನಮೂದಿಸುವ ಮೂಲಕ ಅಪ್ಲಿಕೇಶನ್‌ಗೆ ಲಾಗಿನ್ ಮಾಡಿ.

# ಹೈಕೋರ್ಟ್ ತೀರ್ಪಿನಂತೆ ನೈಸ್ ಟೋಲ್ ಸಂಗ್ರಹ ನಿಲ್ಲಿಸಿ, ಯಾರೂ ಟೋಲ್ ಕಟ್ಟಬೇಡಿ: ಹೆಚ್‌ಡಿಕೆ

• **ಉದಯವಾಹಿನಿ, ಬೆಂಗಳೂರು**

ನೈಸ್ ಸಂಸ್ಥೆ ಭೂ ಅಕ್ರಮದ ಸಂಬಂಧ ಹೈಕೋರ್ಟ್ ತೀರ್ಪು ನೀಡಿದ್ದು, ನೈಸ್ ಟೋಲ್ ಸಂಗ್ರಹ ರದ್ದು ಮಾಡಲು ಗಡುವು ನೀಡುತ್ತೇನೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಜೆ.ಪಿ.ಭವನದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಜುಲೈ 28ರಂದು ನೈಸ್ ಯೋಜನೆ ಅಕ್ರಮ ಸಂಬಂಧ ಹೈಕೋರ್ಟ್ ದ್ವಿಸದಸ್ಯ ಪೀಠ ತೀರ್ಪು ನೀಡಿದೆ. ತೀರ್ಪಿನಲ್ಲಿ ನೈಸ್ ಅಕ್ರಮವಾಗಿ ಟೋಲ್ ಸಂಗ್ರಹ ಮಾಡುತ್ತಿದೆ ಎಂದು ಹೇಳಿದೆ. ಸರ್ಕಾರ ನೈಸ್ ಟೋಲ್ ಸಂಗ್ರಹವನ್ನು ನಿಲ್ಲಿಸಬೇಕು. ಸರ್ಕಾರ ತೀರ್ಮಾನ ಕೈಗೊಳ್ಳದೇ ಇದ್ದರೆ ನಾವು ಹೋರಾಟ ಮಾಡಲಿದ್ದೇವೆ. ಜನರ ರಕ್ಷಣೆ ಮಾಡಬೇಕಾದ ಸರ್ಕಾರ ಖಾಸಗಿ ಸಂಸ್ಥೆಯೊಂದು ಈ ರೀತಿ ಲೂಟಿ ಮಾಡುವಾಗಲೂ ಏಕೆ ಸುಮ್ಮನಿದೆ ಎಂದು ಕೋರ್ಟ್ ಖಾರವಾಗಿ ಪ್ರಶ್ನಿಸಿದೆ. ರಾಜ್ಯ ಸರ್ಕಾರ ಏಕೆ ಸುಮ್ಮನಿದೆ. ತಕ್ಷಣ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.

1997ರಲ್ಲಿ ಬೆಂಗಳೂರು ಮೈಸೂರು ನಡುವೆ ಹೆದ್ದಾರಿ ಮಾಡುವ ಯೋಜನೆ ಇದಾಗಿದೆ. ದೇವೇಗೌಡರು ಸಿಎಂ ಆಗಿದ್ದಾಗ ಪ್ರಾಥಮಿಕ ಒಪ್ಪಂದ ಆಗಿತ್ತು. ಬಳಿಕ ದೇವೇಗೌಡರು ಪ್ರಧಾನಿಯಾದರು. ಅದಾದ ಬಳಿಕ ಈ ವಿಚಾರವಾಗಿ ಹಲವು ಬೆಳವಣಿಗೆಗಳು ಆಯ್ತು. ನೈಸ್ ಕಂಪನಿ ಅವರಿಗೆ ಬೇಕಾಬಿಟ್ಟಿ ರೀತಿಯಲ್ಲಿ ಅಧಿಕಾರಿಗಳು, ಸರ್ಕಾರದವರು ಹಣ ಮಾಡಲು, ರೈತರ ಭೂಮಿ ಲಪಾಟಾಯಿಸಲು, ಕೆರೆ ಕಟ್ಟೆ ನುಂಗಿ ಹಾಕಲು ಅನುವು ಮಾಡಿದ್ದಾರೆ. ನೈಸ್ ರಸ್ತೆ ಹೆಸರಲ್ಲಿ ಐದು ಟೌನ್ ಶಿಪ್, ಪೆರಿಫರೆಲ್ ರಿಂಗ್ ರಸ್ತೆಗಳು ಒಳಗೊಂಡಿದೆ. ನೈಸ್ ಯೋಜನೆ ವಿಚಾರವಾಗಿ ಹೈಕೋರ್ಟ್ ತೀರ್ಪು ನೀಡಿದೆ. 150 ಅರ್ಜಿಗಳು ಈ ಪ್ರಕರಣ ಸಂಬಂಧ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿತ್ತು. ನೈಸ್ ಸಂಸ್ಥೆ ಸಂವಿಧಾನದ ವ್ಯವಸ್ಥೆಯ ದಾರಿ ತಪ್ಪಿಸಿ, ಸುಳ್ಳು ದಾಖಲೆ ಸೃಷ್ಟಿಸಿ ಆರಂಭದಲ್ಲಿ ತೀರ್ಪುಗಳನ್ನು ತಮ್ಮ ಪರವಾಗಿ ಪಡೆದಿದ್ದರು ಎಂದು ವಿವರಿಸಿದರು. ಫ್ರೇಮ್ ವರ್ಕ್ ಒಪ್ಪಂದ ಪ್ರಕಾರ ಕೆಲಸ ಮಾಡಿ ಅಂತ ಇದ್ದಿದ್ದು. ಆದರೆ ನೈಸ್ ಸಂಸ್ಥೆ ಅದನ್ನು ಪಾಲನೆ ಮಾಡಿಲ್ಲ. ಇದು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ದೊಡ್ಡ ಹಗರಣ ಎಂದು ಕೋರ್ಟ್ ಹೇಳಿದೆ. ಯೋಜನೆ ಹೆಸರಲ್ಲಿ 20 ಸಾವಿರ ಎಕರೆ ಲ್ಯಾಂಡ್ ಬ್ಯಾಂಕ್ ಇಟ್ಟು ಕೊಳ್ಳಲಾಗಿದೆ. ಟೋಲ್ ಸಂಗ್ರಹ ಮಾಡಿದಾಗ ಯಾವುದೇ ಮಾನದಂಡವನ್ನು ಪಾಲನೆ ಮಾಡಿಲ್ಲ. ಇದೆಲ್ಲ ಕಾನೂನು ಬಾಹಿರ ಅಂದಿದೆ. ಆದರೆ ಈವರೆಗೆ ಸರ್ಕಾರ ಮೌನಕ್ಕೆ ಶರಣಾಗಿದೆ. ಯಾರಾದರೂ ಒಂದು ರೂಪಾಯಿ ಲಂಚ ಕೇಳಿದರೂ ಕರೆ ಮಾಡಿ ಎಂದು ಸಿಎಂ ಹೇಳಿದ್ದಾರೆ. ಈ ನೈಸ್ ಸಂಸ್ಥೆಯ ದರೋಡೆ ನಿಮಗೆ ಕಾಣಿಸುತ್ತಿಲ್ಲವೇ?. ಇದಕ್ಕಿಂತ ದೊಡ್ಡದು ಬೇಕಾ ಭ್ರಷ್ಟಾಚಾರ ಟೋಲ್ ಸಂಗ್ರಹವನ್ನು ನಿಲ್ಲಿಸಬೇಕು ಎಂದು ಹೈಕೋರ್ಟ್ ಹೇಳಿದೆ. ಈ ಸರ್ಕಾರಕ್ಕೆ ಒಂದು ಗಡುವು ಕೊಡಲು ನಾನು ತೀರ್ಮಾನ ಮಾಡಿದ್ದೇನೆ ಎಂದು ತಿಳಿಸಿದರು.

ಅಂದಿನಿಂದಲೇ **ನೈಸ್ ಟೋಲ್ ಕಟ್ಟಬೇಡಿ:** ನೈಸ್ ಟೋಲ್‌ನ್ನು ಇಂದಿನಿಂದಲೇ ಕಟ್ಟಬೇಡಿ. ನಾನು ರಾಜ್ಯದ ಯುವ ಜನರಿಗೆ ಕರೆ ಕೊಡುತ್ತೇನೆ. ಲೋಕಸಭೆಯಲ್ಲಿ ಕಾಂಗ್ರೆಸ್ ಕಲಾಪ ನಡೆಸಲು ಬಿಡುತ್ತಿಲ್ಲ. ಅದ್ಯಾವುದೋ ಜೆನ್ ಝೀ ಅಂತ ಯುವಕರು ಮುಷ್ಕರ ಮಾಡಿದ್ದಾರೆ ಅಂತ ಹೇಳಿ ಸದನ ನಡೆಯಲು ಬಿಡುತ್ತಿಲ್ಲ. ಇಂದು ಇಲ್ಲಿ ಲೂಟಿ ಆಗುತ್ತಿದೆ.

ಇಂಥ ಹಗಲು ದರೋಡೆಗೆ ಮೌನಕ್ಕೆ ಶರಣಾಗಬೇಡಿ. ಕೋರ್ಟ್ ಈ ಬಗ್ಗೆ ತೀರ್ಪು ಕೊಟ್ಟಿದೆ. ಇದರ ವಿರುದ್ಧ ದನಿ ಎತ್ತಬೇಕು. ಯುವಕರಿಗೆ, ರೈತರಿಗೆ ನಾನು ಕರೆ ಕೊಡುತ್ತಿದ್ದೇನೆ. ಎದ್ದು ಹೋರಾಟ ಮಾಡಿ. ಇಂಥ ಅಕ್ರಮ ನಿಲ್ಲಿಸದೇ ಇದ್ದರೆ ರಾಜ್ಯದ ಭವಿಷ್ಯ ಎಲ್ಲಿಗೆ ಹೋಗುತ್ತದೆ. ಬೆಂಗಳೂರು ನಾಗರಿಕರಿಗೆ, ನಾಡಿನಯುವಕರಿಗೆ, ರೈತರಿಗೆ ನಾನು ಈ ಬಗ್ಗೆ ಮನವಿ ಮಾಡುತ್ತೇನೆ. ಈ ಸಂಬಂಧ ಸರ್ಕಾರಕ್ಕೆ ವಿಸ್ತೃತ ಪತ್ರವನ್ನೂ ಬರೆಯುತ್ತೇನೆ.

ಒಂದು ವಾರ ಕಾಯುತ್ತೇನೆ. ಆ ಮೇಲೆ ಯಾವ ರೀತಿ ಹೋರಾಟ ಮಾಡಬೇಕು ಎಂದು ತೀರ್ಮಾನಿಸುತ್ತೇವೆ ಎಂದರು.ಟಿ.ಬಿ.ಜಯಚಂದ್ರ ಅವರೇ ನೈಸ್ ಮೇಲಿನ ಸದನ ಸಮಿತಿ ಅಧ್ಯಕ್ಷರಾಗಿ ವರದಿ ಸಲ್ಲಿಸುತ್ತಾರೆ. ಆ ವರದಿಯಲ್ಲಿ ನೈಸ್ ಸಂಸ್ಥೆ ಹಗರಣದ ವರದಿ ನೀಡಿದ್ದಾರೆ. ಸಿಬಿಐ ತನಿಖೆಗೆ ಕೊಡಬೇಕು. ನೈಸ್ ಸಂಸ್ಥೆ ಕೆಲಸ ರದ್ದು ಮಾಡಬೇಕು. ಭೂಮಿ ವಾಪಸ್ ಪಡೆಯಬೇಕು ಎಂದು ವರದಿ ನೀಡಿದ್ದರು. ಸಿಎಂ ಆಗಿ ವಿಧಾನಸೌಧಕ್ಕೆ ನಮಸ್ಕರಿಸಿ ಪ್ರವೇಶಿಸಿದ ಡಿ.ಕೆ.ಶಿವಕುಮಾರ್ ಅವರು ಈ ಹೈಕೋರ್ಟ್ ತೀರ್ಪಿನ ಬಗ್ಗೆ ಏನು ಹೇಳುತ್ತಾರೆ. ರೈತರು ಭೂಮಿ ಕಳೆದುಕೊಂಡು 20 ವರ್ಷ ಕಳೆದಿದೆ. ಆದರೆ ಕೆಐಎಡಿಬಿ ಇನ್ನೂ ರೈತರಿಗೆ ಪರಿಹಾರ ಹಣ ನೀಡಿಲ್ಲ. ರೈತರು ನೈಸ್ ಸಂಸ್ಥೆಗೆ ತಮ್ಮ ಜಮೀನನ್ನು ಬರೆದುಕೊಟ್ಟಿದ್ದಾರೆ.

ನೈಸ್ ಸಂಸ್ಥೆ ಭೂಮಿಗಳನ್ನು ಸಿಕ್ಕಸಿಕ್ಕವರಿಗೆ ಮಾರಾಟ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.550 ಎಕರೆ ಹೆಚ್ಚುವರಿ ಭೂಮಿಯನ್ನು ನೈಸ್ ಸಂಸ್ಥೆಗೆ ಕೊಟ್ಟಿದ್ದರು. ಆದರೆ ನೈಸ್ ಸಂಸ್ಥೆ ನಮಗೆ ಇನ್ನೂ ಭೂಮಿಯನ್ನು ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದೆ. ನೈಸ್ ಸಂಸ್ಥೆ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಲವು ಬಾರಿ ಟೋಲ್ ದರವನ್ನು ಪರಿಷ್ಕರಣೆ ಮಾಡಿದೆ ಎಂದು ಸರ್ಕಾರವೇ ಕೋರ್ಟ್‌ನಲ್ಲಿ ಹೇಳಿದೆ. ಕೆರೆಕಟ್ಟೆಗಳನ್ನು ಕೆಐಎಡಿಬಿ ಹಾಗು ಬಿಡಿಎ ವತಿಯಿಂದ ನೈಸ್ ಸಂಸ್ಥೆಗೆ ನೀಡಿದೆ ಎಂದು ಕೋರ್ಟ್ ಮುಂದೆ ಸರ್ಕಾರ ಪರ ವಕೀಲರು ಹೇಳಿದ್ದಾರೆ. ಫ್ರೇಮ್‌ವರ್ಕ್ ಅಗ್ರೀಮೆಂಟನ್ನು ನೈಸ್ ಸಂಸ್ಥೆ ಉಲ್ಲಂಘನೆ ಮಾಡಿರುವುದಾಗಿ ಸರ್ಕಾರವೇ ತಿಳಿಸಿದೆ ಎಂದು ಹೇಳಿದರು. 2006ರಲ್ಲಿ ನಾನು ಈ ವಿಚಾರವನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಮುಖ್ಯಮಂತ್ರಿ ಆಗಿದ್ದಾಗ ಈ ವಿಷಯವನ್ನು ಕಲಾಪದಲ್ಲಿ ಪ್ರಸ್ತಾಪ ಮಾಡಿದ್ದೆ. ಸಂಪುಟ ಸಭೆಯಲ್ಲಿ ಈ ಯೋಜನೆಯನ್ನು ರದ್ದು ಮಾಡಬೇಕು ಎಂಬ ನಿರ್ಧಾರ ಕೈಗೊಂಡಿದ್ದೆ. ಆದರೆ ಬಳಿಕ ಅದನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ.

### ಬಡವರ ಮೇಲೆ ಗಧಾ ಪ್ರಹಾರ, ನೈಸ್ ಮೇಲೆ ಏನು ಕ್ರಮ

ಸಾರ್ವಜನಿಕರಿಗೆ ನಾನು ಮನವಿ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಟೋಲ್ ಪಾವತಿಸಬೇಡಿ ಸರ್ಕಾರಕ್ಕೆ ಪತ್ರ ಬರೆದು ಒಂದು ಎಚ್ಚರಿಕೆಯನ್ನು ಕೊಡಲು ನಾನು ತೀರ್ಮಾನ ಮಾಡಿದ್ದೇನೆ. ಯಾರೋ ಪಾಪ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಿ ಹೊಟ್ಟೆ ತುಂಬಿಸುವವರನ್ನು ಕ್ಲೀನ್ ಮಾಡುತ್ತೇನೆ ಅಂತ ಹೇಳಿ ಕಾರ್ಯಾಚರಣೆ ಮಾಡುತ್ತಿದ್ದೀರಿ. ನೈಸ್ ಸಂಸ್ಥೆಯನ್ನು ಯಾವಾಗ ಕ್ಲೀನ್ ಮಾಡುತ್ತೀರಾ?, ಕೃಷ್ಣಬೈರೇಗೌಡರೇ?. ಬಡವರ ಮೇಲೆ ಗಧಾ ಪ್ರಹಾರ ಮಾಡುತ್ತೀರಿ. ಇದು ನೈಸ್ ಸಂಸ್ಥೆ ವಿಚಾರದಲ್ಲಿ ಹಗಲು ದರೋಡೆಯಾಗಿದೆ. ಇದಕ್ಕೆ ಉತ್ತರ ಕೊಡಿ. ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.



**ಈ ದಿನದ ದರ** ಪೆಟ್ರೋಲ್: 110.93₹/L | ಡೀಸೆಲ್ : 99.56₹/L | ಬಂಗಾರ: ₹ 15,235 /Gram 24ct ₹ 13,965/Gram 22ct | ಬೆಳ್ಳಿ: ₹245.00/

# ಬಿಡದಿ ಟೌನ್‌ಶಿಪ್ ಯೋಜನೆ ಅಸಂವಿಧಾನಿಕ ಕಾನೂನುಬಾಹಿರ: ನ್ಯಾಯಮೂರ್ತಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿ ಈ ಮೂಲಕ ಟೌನ್‌ಶಿಪ್ ಕಾರ್ಯಗತಗೊಳಿಸಲು ಯೋಜಿಸಿರುವ ರಾಜ್ಯ ಸರ್ಕಾರದ ನಿರ್ಧಾರವು ಅಸಂವಿಧಾನಿಕ' ಎಂದು ಬಿಡದಿ ಟೌನ್‌ಶಿಪ್ ಕುರಿತು ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ವಿ ಗೋಪಾಲ ಗೌಡ ನೇತೃತ್ವದ ಸಮಿತಿ ಅಭಿಪ್ರಾಯ ಪಟ್ಟಿದೆ.

ಜಿಬಿಡಿಎಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಕೆಯುಡಿಎ) ಕಾಯ್ದೆಯ ಸೆಕ್ಷನ್ 3ರ ಅಡಿಯಲ್ಲಿ ರಚಿಸಲಾದ ಪ್ರಾಧಿಕಾರವೆಂದು ಪರಿಗಣಿಸಲಾಗುವುದಿಲ್ಲ. ಭೂಸ್ವಾಧೀನಕ್ಕಾಗಿ, ಪ್ರದೇಶವು ಕೆಯುಡಿಎ ಕಾಯ್ದೆಯ ಸೆಕ್ಷನ್ 2(ಗಳ) ಅರ್ಥದೊಳಗೆ ನಗರ ಪ್ರದೇಶದ ಅಡಿಯಲ್ಲಿರಬೇಕು ಮತ್ತು ಯೋಜನೆಯ ಸ್ವಾಧೀನಕ್ಕಾಗಿ ಪ್ರಸ್ತಾಪಿಸಲಾದ ಭೂಮಿಗಳು ಗ್ರಾಮ ಪಂಚಾಯತ್ ಮಿತಿಯಡಿಯಲ್ಲಿವೆ ಎಂದು ವರದಿ ಒತ್ತಿಹೇಳಿದೆ. ಸ್ವಾಧೀನಕ್ಕಾಗಿ ಗುರುತಿಸಲಾದ ಭೂಮಿ ಫಲವತ್ತಾದ ನೀರಾವರಿ ಭೂಮಿಯಾಗಿದೆ ಎಂದು ವರದಿಯು ಎತ್ತಿ ತೋರಿಸುತ್ತದೆ. ಈ ಭೂಮಿಯಲ್ಲಿ ಪಶುಸಂಗೋಪನೆ ಮತ್ತು ಹಾಲು ಉತ್ಪಾದನೆ, ರೇಷ್ಮೆ ಕೃಷಿ, ತೋಟಗಾರಿಕೆ ಮತ್ತು ತರಕಾರಿ ಕೃಷಿ ಇದೆ. ಇವೆಲ್ಲವೂ ಸಾಮಾಜಿಕ ಮತ್ತು ಪರಿಸರ ಪ್ರಭಾವದ ಭಾಗವಾಗಿದೆ ಮತ್ತು ಇದನ್ನು ನಿರ್ಲಕ್ಷಿಸಲಾಗುತ್ತದೆ. ಸಾಮಾಜಿಕ ಕಾರ್ಯಕರ್ತ ಎಸ್.ಆರ್. ಹಿರೇಮಠ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯಶವಂತ ಟಿ., ಕರ್ನಾಟಕ ರಾಜ್ಯ ರೈತ ಸಂಘದ ಪ್ರತಿನಿಧಿ ಬಡಗಲಪುರ ನಾಗೇಂದ್ರ, ಸಾಮಾಜಿಕ ಕಾರ್ಯಕರ್ತ ನೂರ್ ಶ್ರೀಧರ್ ಮತ್ತು ಬಿಡದಿಯ ರೈತರು ಶುಕ್ರವಾರ ಬಿಡುಗಡೆ ಮಾಡಿದ ವರದಿಯಲ್ಲಿ, ಜಿಬಿಡಿಎ ಕಾನೂನುಬಾಹಿರ ಮತ್ತು ಯಾವುದೇ ಕಾನೂನು ಅಡಿಪಾಯ ಅಥವಾ ಬೆಂಬಲವನ್ನು ಹೊಂದಿಲ್ಲ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಸುಧೀಂದ್ರನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಆಗಸ್ಟ್ 4 ರಿಂದ 7ರ ವರೆಗೆ ನಾಲ್ಕು ದಿನಗಳ ಕಾಲ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.

ಮೊದಲ ಮೂರು ದಿನಗಳು ವಿವಿಧ ಭಜನಾ ಮಂಡಳಿಗಳಿಂದ ಭಜನೆ ಮತ್ತು ಪಂಡಿತ ಶ್ರೀ ಚಂದ್ರಶೇಖರ ಆಚಾರ್ಯರಿಂದ ಶ್ರೀ ಜಯತೀರ್ಥರ ಜೀವನ ಮತ್ತು ಸಾಧನೆ ವಿಷಯವಾಗಿ ಧಾರ್ಮಿಕ ಪ್ರವಚನ ನಡೆಯಿತು. ಆಗಸ್ಟ್ 7ರಂದು ಜರುಗಿದ ಹರಿನಾಮ ಸಂಕೀರ್ತನೆ ಕಾರ್ಯಕ್ರಮದಲ್ಲಿ ಸಿಂಧನೂರಿನ ಶ್ರೀಮತಿ ಸುಷ್ಮಾ ಜೋಯಿಸ್ ಅವರಿಂದ ಗಾಯನ ಕಾರ್ಯಕ್ರಮ ಜರುಗಿತು.

ಗಜವದನ ಬೇಡುವೆ ಎಂಬ ವಿಘ್ನೇಶ್ವನ ಕೃತಿಯೊಂದಿಗೆ ಕಾರ್ಯಕ್ರಮವನ್ನು ಆರಂಭಿಸಿದ ಸುಷ್ಮಾ ತಂದೆ ವಿಜಯರಾಯ', ಭೋಯತಿ ವರದೇಂದ್ರ

## ಪ್ರೇಕ್ಷಕರ ಮನ ಸೆಳೆದ ಸುಷ್ಮಾ ಗಾಯನ


ಉದಯವಾಹಿನಿ ಚಿತ್ರ

ನೋಡು ನೋಡು ಟೀಕಾರಾಯರ', ಶಂಭೋ ಸ್ವಯಂಭೋ, ಬಾರೇ ಭಾಗ್ಯದ ನಿಧಿಯೇ, ಜಾಣ ನೀನಹುದೋ, ರಾಮ ರಾಮ ಜಯರಾಮ ಮುಂತಾದ ಅಪರೂಪದ ಕೃತಿಗಳನ್ನು ಸುಶ್ರಾವ್ಯವಾಗಿ ಹಾಡಿ ಪ್ರೇಕ್ಷಕರ ಮನ ಸೆಳೆದರು.

ಇವರ ಗಾಯನಕ್ಕೆ ಹಾರ್ಮೋನಿಯಂ ವಾದನದಲ್ಲಿ ಶ್ರೀ ಶ್ರೀ ರಾಮು ಕೊಡೇಕಲ್ ಮತ್ತು ತಬಲಾ ವಾದನದಲ್ಲಿ ಶ್ರೀ ಭೀಮಾಶಂಕರ್ ಸಾಥ್ ನೀಡಿದರು. ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ಸ್ವಾಗತ ಮತ್ತು ವಂದನಾರ್ಪಣೆ ಮಾಡಿದರು.

## ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಂಕಿಂಗ್, ಉಳಿತಾಯ, ಹೂಡಿಕೆ, 956 ಪಬ್ಲಿಕ್ ಶಾಲೆಗಳಲ್ಲಿ ಜಾರಿ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಇನ್ನು ಮುಂದೆ ಬ್ಯಾಂಕಿಂಗ್, ಉಳಿತಾಯ, ಹೂಡಿಕೆ ಮತ್ತು ಷೇರು ಮಾರುಕಟ್ಟೆಯ ಮೂಲಭೂತ ಅಂಶಗಳನ್ನು ಕಲಿಸಲಾಗುವುದು. ರಾಜ್ಯ ಸರ್ಕಾರದ ಹೊಸ ಹಣಕಾಸು ಸಾಕ್ಷರತಾ ಉಪಕ್ರಮದ ಭಾಗವಾಗಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗುತ್ತಿದೆ.

ಮೊದಲ ಹಂತದಲ್ಲಿ ರಾಜ್ಯದಾದ್ಯಂತ ಇರುವ 956 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಈ ಉಪಕ್ರಮವನ್ನು ಜಾರಿಗೊಳಿಸಲಾಗುವುದು. ಪ್ರೌಢಶಾಲೆ ಮತ್ತು ಪದವಿಪೂರ್ವ ಹಂತದ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡಿರುವ ಈ ಕಾರ್ಯಕ್ರಮದ ಉದ್ದೇಶ ವಿದ್ಯಾರ್ಥಿಗಳಲ್ಲಿ ಹಣಕಾಸು ಯೋಜನೆ ಮತ್ತು ಹಣ ನಿರ್ವಹಣೆಯ ಅರಿವು ಮೂಡಿಸುವುದಾಗಿದೆ.ಈ ಕುರಿತು ಕರ್ನಾಟಕ ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆಯಲ್ಲಿ, ಕಾರ್ಯಕ್ರಮದಡಿ ಬ್ಯಾಂಕ್ ಅಧಿಕಾರಿಗಳು, ಹಣಕಾಸು ಸಲಹೆಗಾರರು ಹಾಗೂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜುಗಳ ಬೋಧಕ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಉಳಿತಾಯ, ಡಿಜಿಟಲ್ ಪಾವತಿ, ಜವಾಬ್ದಾರಿಯುತ ಸಾಲ ಪಡೆಯುವಿಕೆ, ವಿಮೆ ಮತ್ತು ತೆರಿಗೆಯ ಮೂಲಭೂತ ಅಂಶಗಳ ಕುರಿತು ತರಗತಿಗಳನ್ನು ನಡೆಸಲಿದ್ದಾರೆ ಎಂದು ತಿಳಿಸಲಾಗಿದೆ. ಪಠ್ಯಕ್ರಮದ ಭಾಗವಾಗಿ ವಿದ್ಯಾರ್ಥಿಗಳಿಗೆ ಷೇರು ಮಾರುಕಟ್ಟೆಯ ಪರಿಕಲ್ಪನೆಗಳು, ಷೇರುಗಳು, ವಹಿವಾಟು ಮತ್ತು ಹೂಡಿಕೆಗಳ ಬಗ್ಗೆ ಪರಿಚಯಿಸಲಾಗುವುದು. ಇದರಿಂದ ಚಿಕ್ಕ ವಯಸ್ಸಿನಲ್ಲೇ ಹಣಕಾಸು ವ್ಯವಸ್ಥೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅವರಿಗೆ ನೆರವಾಗಲಿದೆ. ಹಣಕಾಸು ವಂಚನೆಗಳ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಅವುಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಮಾರ್ಗಗಳ ಕುರಿತು ತಿಳಿಸುವುದಕ್ಕೂ ಕಾರ್ಯಕ್ರಮದಲ್ಲಿ ಒತ್ತು ನೀಡಲಾಗುವುದು.

# ಅಕ್ರಮ ವಲಸಿಗರ ಪತ್ತೆಗೆ ಬೆಂಗಳೂರಿನಲ್ಲಿ ಪೊಲೀಸರ ವಿಶೇಷ ಕಾರ್ಯಾಚರಣೆ

## ಬೆಂಗಳೂರು ನಗರ ಪೊಲೀಸ್ ಆಯುಕ್ತರ ನಿರ್ದೇಶನದಂತೆ ನಗರದಾದ್ಯಂತ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ

• ಉದಯವಾಹಿನಿ, ಬೆಂಗಳೂರು

ನಗರದ ವಿವಿಧೆಡೆ ನೆಲೆಸಿರುವ ಶಂಕಿತ ಅಕ್ರಮ ವಲಸಿಗರನ್ನು ಪತ್ತೆಹಚ್ಚಲು ಬೆಂಗಳೂರು ನಗರ ಪೊಲೀಸರು ಶನಿವಾರ ವಿಶೇಷ ಕಾರ್ಯಾಚರಣೆ 'ಆಪರೇಷನ್ ಮುಕ್ತ' ಆರಂಭಿಸಿದ್ದಾರೆ.

ವೈಟ್‌ಫೀಲ್ಡ್ ವಿಭಾಗದ 30ಕ್ಕೂ ಹೆಚ್ಚು ಸ್ಥಳಗಳು ಹಾಗೂ ಎಲೆಕ್ಟ್ರಾನಿಕ್ ಸಿಟಿ ಪ್ರದೇಶದ ಹಲವು ಕಡೆಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ. ಬೆಂಗಳೂರು ನಗರ ಪೊಲೀಸ್ ಆಯುಕ್ತರ ನಿರ್ದೇಶನದ ಮೇರೆಗೆ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ವೈಟ್‌ಫೀಲ್ಡ್ ವಿಭಾಗದಲ್ಲಿ 500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆ ಎಂದು ವೈಟ್‌ಫೀಲ್ಡ್ ಡಿಸಿಪಿ ಸೈದುಲ್ಲಾ ಅದವತ್ ತಿಳಿಸಿದ್ದಾರೆ.

1 ವಲಸಿಗನೇ ನೀಡಿದ್ದ ದೂರು

2 500ಕ್ಕೂ ಹೆಚ್ಚು ಪೊಲೀಸ್

3 15/20 ಸ್ಥಳಗಳಲ್ಲಿ ಶೋಧ

ವೈಟ್‌ಫೀಲ್ಡ್ ವಿಭಾಗದಲ್ಲೇ 500ಕ್ಕೂ ಹೆಚ್ಚು ಸಿಬ್ಬಂದಿ ಮತ್ತು ಅಧಿಕಾರಿಗಳು ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಇದು ನಿರಂತರವಾಗಿ ನಡೆಯುವ ನಿಯಮಿತ ಕಾರ್ಯಾಚರಣೆಯಾಗಿದೆ ಎಂದು ಅವರು ಹೇಳಿದ್ದಾರೆ.

ಪೊಲೀಸ್ ಠಾಣೆಗಳ ವ್ಯಾಪ್ತಿಯ 30ಕ್ಕೂ ಹೆಚ್ಚು ಸ್ಥಳಗಳಲ್ಲಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಯಾರಾದರೂ ಅನುಮಾನಾಸ್ಪದವಾಗಿ ಕಂಡುಬಂದರೆ ಅವರ ದಾಖಲೆಗಳನ್ನು ಪರಿಶೀಲಿಸಿ, ಹಿನ್ನೆಲೆಯನ್ನೂ ಪರಿಶೀಲಿಸಲಾಗುವುದು ಎಂದು ಅದವತ್ ಹೇಳಿದ್ದಾರೆ.

ವೈಟ್‌ಫೀಲ್ಡ್‌ನ ಆರು ಪೊಲೀಸ್ ಠಾಣೆಗಳ ವ್ಯಾಪ್ತಿಯ ಸುಮಾರು 30 ಸ್ಥಳಗಳು ಹಾಗೂ ಎಲೆಕ್ಟ್ರಾನಿಕ್ ಸಿಟಿಯ ಮತ್ತಷ್ಟು 15ರಿಂದ 20 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ. ವೈಟ್‌ಫೀಲ್ಡ್ ವಿಭಾಗದಲ್ಲಿ ಸುಮಾರು 40 ಮಂದಿ ಅನುಮಾನಾಸ್ಪದ ವ್ಯಕ್ತಿಗಳನ್ನು ದಾಖಲೆ ಪರಿಶೀಲನೆಗಾಗಿ ವಶಕ್ಕೆ ಪಡೆಯಲಾಗಿದೆ.

ಅವರ ಬಳಿಯಿಂದ ದೊರೆತ ದಾಖಲೆಗಳ ಆಧಾರದ ಮೇಲೆ ನಾಲ್ವರು ಬಾಂಗ್ಲಾದೇಶದ ಪ್ರಜೆಗಳು ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶೆಡ್‌ಗಳಲ್ಲಿ ವಾಸಿಸುತ್ತಿರುವವರು ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಸೇರಿದಂತೆ ಗುರುತು ಮತ್ತು ಪೌರತ್ವಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಪೊಲೀಸರು ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ದಾಖಲೆಗಳನ್ನು ಒದಗಿಸಲು ಸಾಧ್ಯವಾಗದವರು ಅಥವಾ ಅನುಮಾನಾಸ್ಪದವಾಗಿ ಕಂಡುಬಂದವರನ್ನು ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಠಾಣೆಗಳಿಗೆ ಕರೆದೊಯ್ಯಲಾಗಿದೆ. ಬಾಂಗ್ಲಾದೇಶ, ಪಶ್ಚಿಮ ಬಂಗಾಳ, ಅಸ್ಸಾಂ, ಬಿಹಾರ ಮತ್ತು ನೇಪಾಳದಿಂದ ಬಂದವರು ವಾಸಿಸುತ್ತಿದ್ದ ತಾತ್ಕಾಲಿಕ ವಸತಿ ಪ್ರದೇಶಗಳಲ್ಲೂ ಶೋಧ ನಡೆಸಲಾಗಿದೆ. ಪರಿಶೀಲನೆಯ ಬಳಿಕ ಭಾರತೀಯ ಪ್ರಜೆಗಳಿಗೆ ಅಲ್ಲಿಯೇ ಉಳಿಯಲು ಅವಕಾಶ ನೀಡಲಾಗುವುದು. ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳು ಪತ್ತೆಯಾದರೆ ಹೆಚ್ಚಿನ ಕಾನೂನು ಕ್ರಮಕ್ಕಾಗಿ ಅವರನ್ನು ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಯ ಮುಂದೆ ಹಾಜರುಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಒಂದು ಸ್ಥಳದಲ್ಲಿ ಸುಮಾರು 150 ಶೆಡ್‌ಗಳು ಪತ್ತೆಯಾಗಿದ್ದರೆ, ಮತ್ತೊಂದು ವಸತಿ ಪ್ರದೇಶದಲ್ಲಿ 100ಕ್ಕೂ ಹೆಚ್ಚು ಶೆಡ್‌ಗಳು ಕಂಡುಬಂದಿವೆ. ಜಮೀನು ಮಾಲೀಕರ ಬಗ್ಗೆ ಕೇಳಿದಾಗ ಅದವತ್, ಅದರ ಬಗ್ಗೆಯೂ ಪರಿಶೀಲನೆ ನಡೆಸುತ್ತೇವೆ.


ಉದಯವಾಹಿನಿ ಚಿತ್ರ

ನಿಮಗೆ ತಿಳಿದಿರುವಂತೆ, ಹಲವು ಕಡೆ ಸ್ಥಳೀಯರು ಈ ಶೆಡ್‌ಗಳನ್ನು ನಿರ್ಮಿಸಿ ಬಾಡಿಗೆಗೆ ನೀಡುತ್ತಾರೆ. ಇಲ್ಲಿ ವಿವಿಧ ರಾಜ್ಯಗಳಿಂದ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಬಂದವರು ಸೇರಿದಂತೆ ಅನೇಕರು ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹ ಕಟ್ಟಡ ಕಾರ್ಮಿಕರು ಈ ಶೆಡ್‌ಗಳಲ್ಲಿ ವಾಸಿಸುತ್ತಾರೆ'' ಎಂದು ಹೇಳಿದ್ದಾರೆ.

**ತನಿಖೆಗೆ ಕರ್ನಾಟಕ ಹೈಕೋರ್ಟ್ ತಡೆ**

ಅಕ್ರಮ ವಲಸಿಗನೊಬ್ಬ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ವೈದ್ಯರ ವಿರುದ್ಧ ಪ್ರಕರಣ ದಾಖಲಿಸಿದ್ದರು. ವೈದ್ಯ-ಸಾಮಾಜಿಕ ಕಾರ್ಯಕರ್ತರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳ ಮುಂದಿನ ತನಿಖೆಗೆ ಕರ್ನಾಟಕ ಹೈಕೋರ್ಟ್ ತಡೆ ನೀಡಿತ್ತು.

**ವಸತಿ ವ್ಯವಸ್ಥೆ ಕಲ್ಪಿಸುವಲ್ಲಿ ಜಮೀನು ಮಾಲೀಕರು**

ಈ ಶೆಡ್‌ಗಳನ್ನು ತಲಾ ಸುಮಾರು ೨,೦೦೦ರಿಂದ ೩,೦೦೦ ರೂ.ಗೆ ಬಾಡಿಗೆಗೆ ನೀಡಲಾಗುತ್ತಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಇಂತಹ ವಸತಿ ವ್ಯವಸ್ಥೆ ಕಲ್ಪಿಸುವಲ್ಲಿ ಜಮೀನು ಮಾಲೀಕರು ಹಾಗೂ ಇತರರ ಪಾತ್ರವನ್ನೂ ಪರಿಶೀಲಿಸಲಾಗುತ್ತಿದೆ.

> ಉಳಿದವರ ದಾಖಲೆಗಳ ಪರಿಶೀಲನೆ ಮುಂದುವರಿದಿದೆ. ''ಯಾರಾದರೂ ಬೇರೆ ದೇಶದವರು ಎಂಬುದನ್ನು ಸೂಚಿಸುವ ಗುರುತಿನ ಚೀಟಿ ಅಥವಾ ಇತರ ದಾಖಲೆಗಳು ಪತ್ತೆಯಾದರೆ, ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಗೆ ಪತ್ರ ಬರೆಯಲಾಗುವುದು. ಗಡಿಪಾರು ಆದೇಶ ದೊರೆತ ಬಳಿಕ ಕಾನೂನು ಪ್ರಕ್ರಿಯೆ ಅನುಸರಿಸಿ ಅವರನ್ನು ಅವರವರ ದೇಶಗಳಿಗೆ ಕಳುಹಿಸಲಾಗುವುದು'' ಎಂದು ತಿಳಿಸಿದ್ದಾರೆ.-ಡಿಸಿಪಿ

> ಪೊಲೀಸರ ಕ್ರಮವನ್ನು ಪ್ರಶ್ನಿಸಿದ್ದರು. ಅಕ್ರಮ ವಲಸೆಯನ್ನು ವರದಿ ಮಾಡುವವರ ವಿರುದ್ಧವೇ ಪ್ರಕರಣ ದಾಖಲಿಸುವ ಮೂಲಕ ವ್ಯವಸ್ಥೆ ಅಕ್ರಮ ವಲಸೆಗೆ ಬೆಂಬಲ ನೀಡಬಾರದು ಎಂದು ಅವರು ಅಭಿಪ್ರಾಯಪಟ್ಟಿದ್ದರು.
> -ನ್ಯಾಯಮೂರ್ತಿ ಎಂ. ನಾಗಪ್ರಸನ್ನ

# ಗಾಂಧಿ ರಸ್ತೆಯಲ್ಲಿ ಶೀಘ್ರದಲ್ಲೇ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ಗಾಂಧಿ ರಸ್ತೆಯಲ್ಲಿ ಶೀಘ್ರದಲ್ಲೇ ಸಾರ್ವಜನಿಕರ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗುತ್ತಿದೆ. ಕ್ಯಾಂಪಸ್ ಒಳಗಡೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ದೃಶ್ಯಕಲೆ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿನಿ ಮಾನಸಾ ಮೃತಪಟ್ಟ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಶುಕ್ರವಾರ ನಡೆದ ಸಭೆಯಲ್ಲಿ ಬಿ.ಯು. ಕುಲಪತಿ ಪ್ರೊ. ಸಿ. ಶಿವರಾಜು ಮತ್ತು ಪೊಲೀಸ್ ಉಪ ಆಯುಕ್ತರು (ನೈಋತ್ಯ ವಿಭಾಗ) ಅನಿತಾ ಹದ್ದಣ್ಣವರ್ ಅವರು ಈ ಕುರಿತು ನಿರ್ಧಾರ ಕೈಗೊಂಡರು.

ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಕ್ಷೇಮಕ್ಕಾಗಿ ಬೆಂಗಳೂರು ನಗರ ಪೊಲೀಸರ ಸಹಯೋಗದೊಂದಿಗೆ ಈ ಕ್ರಮಗಳನ್ನು ಜಾರಿಗೆ ತರಲಾಗುವುದು. ಕ್ಯಾಂಪಸ್ ಒಳಗಡೆ ಸುರಕ್ಷತೆಯ ಮೇಲೆ ಪರಿಣಾಮ ಬೀರುವ ದಟ್ಟ ವಾಹನ ಸಂಚಾರ, ಅತಿಯಾದ ವೇಗ, ಭಾರಿ ವಾಹನಗಳ ಸಂಚಾರ ಮತ್ತು ಅನಧಿಕೃತ ವಾಹನ ನಿಲುಗಡೆ ಸೇರಿದಂತೆ ಹಲವು ಪ್ರಮುಖ ವಿಷಯಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತು ಎಂದು ಪ್ರೊ. ಶಿವರಾಜು ತಿಳಿಸಿದರು.

ಗಾಂಧಿ ರಸ್ತೆಯಲ್ಲಿ ಸಾರ್ವಜನಿಕರ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಲು ರಾಜ್ಯ ಸರ್ಕಾರ ಮತ್ತು ಬಿ.ಯು. ಸಿಂಡಿಕೇಟ್‌ನೊಂದಿಗೆ ಸಮಾಲೋಚಿಸಿ ವಿಶ್ವವಿದ್ಯಾಲಯವು ಅಗತ್ಯ ಪ್ರಕ್ರಿಯೆಗಳನ್ನು ಆರಂಭಿಸಲಿದೆ.

ಅಂತಿಮ ನಿರ್ಧಾರ ಜಾರಿಗೆ ಬರುವವರೆಗೆ, ಏಕಮುಖ ಸಂಚಾರ ವ್ಯವಸ್ಥೆ, ಪಾದಚಾರಿಗಳಿಗೆ ಮೀಸಲಾದ ದಾರಿಗಳ ನಿರ್ಮಾಣ, ರಸ್ತೆ ಬದಿಯ ಅನಧಿಕೃತ ಅಂಗಡಿಗಳ ತೆರವು ಹಾಗೂ ಆವರಣದ ಪ್ರಮುಖ ರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಅವುಗಳನ್ನು ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯ 'ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್'ಗೆ ಸಂಪರ್ಕಿಸುವಂತಹ ಹಲವು ಮಧ್ಯಂತರ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಕುಲಪತಿ ಹೇಳಿದರು.

## ಕರ್ನಾಟಕದಲ್ಲಿ ಅಕ್ರಮ ವಲಸಿಗರ ವಿರುದ್ಧ ಕಾರ್ಯಾಚರಣೆ.. 3 ತಿಂಗಳಲ್ಲಿ 1,000 ಮಂದಿ ಪತ್ತೆ: ಸಚಿವ ಖರ್ಗೆ

• ಉದಯವಾಹಿನಿ, ಬೆಂಗಳೂರು

ಕಳೆದ 3 ತಿಂಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಸಾವಿರ ಮಂದಿ ಅಕ್ರಮ ವಲಸಿಗರು ಪತ್ತೆಯಾಗಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಅಕ್ರಮ ವಲಸಿಗರ ಕುರಿತು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಕಳೆದ ಮೂರು ತಿಂಗಳಿನಿಂದ ನಡೆಸುತ್ತಿರುವ ಕಟ್ಟುನಿಟ್ಟಿನ ತಪಾಸಣೆ ಮತ್ತು ಶೋಧ ಕಾರ್ಯಾಚರಣೆಯಲ್ಲಿ ಬಾಂಗ್ಲಾದೇಶ ಹಾಗೂ ಆಫ್ರಿಕಾದಿಂದ ಬಂದಿರುವ ಶಂಕಿತ ಅಕ್ರಮ ವಲಸಿಗರು ಸೇರಿದಂತೆ ಸುಮಾರು 1,000 ಮಂದಿಯನ್ನು ಗುರುತಿಸಲಾಗಿದೆ' ಎಂದು ತಿಳಿಸಿದರು. ಅಕ್ರಮ ವಲಸಿಗರ ವಿರುದ್ಧ ಸರ್ಕಾರ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸುತ್ತಿದೆ. ಈ ಕಾರ್ಯಾಚರಣೆ ತಾತ್ಕಾಲಿಕವಾಗಿ ನಡೆಸಿ ನಿಲ್ಲಿಸುವುದಲ್ಲ, ನಿರಂತರವಾಗಿ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದರು. ''ಬಾಂಗ್ಲಾದೇಶದಿಂದ ಬಂದಿರುವ ಅಕ್ರಮ ವಲಸಿಗರ ಕುರಿತು ಶೋಧ ನಡೆಸಲಾಗುತ್ತಿದೆ. ಅವರು ಬಾಂಗ್ಲಾದೇಶ ಅಥವಾ ಆಫ್ರಿಕಾದಿಂದ ಬಂದವರಾಗಿರಬಹುದು. ನಾವು ಕಟ್ಟುನಿಟ್ಟಾಗಿ ಹಾಗೂ ಗಂಭೀರವಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದೇವೆ. ಕಳೆದ ಮೂರು ತಿಂಗಳಲ್ಲಿ ಸುಮಾರು 1,000 ವಲಸಿಗರನ್ನು ಗುರುತಿಸಲಾಗಿದೆ.

# ವಾರದಲ್ಲಿ ಜಾಬ್ ಕಾರ್ಡ್ ಮೇಳ ನಡೆಸಲು ಸೂಚನೆ

• ಉದಯವಾಹಿನಿ, ಬೆಂಗಳೂರು

ಮನ್ರೇಗಾದ ಬದಲಾದ ರೂಪ ವಿಬಿಜಿ ರಾಮ್ ಜಿಯಡಿ ಅರ್ಹ ಫಲಾನುಭವಿಗಳಿಗ ಉದ್ಯೋಗ ನೀಡಲು ಒಂದು ವಾರದೊಳಗೆ ಜಾಬ್ ಕಾರ್ಡ್ ಮೇಳ ನಡೆಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ, ಸೂಚಿಸಿದ್ದಾರೆ.

ಇಲಾಖೆಯ ಕಾರ್ಯದರ್ಶಿಯವರಿಗೆ ಲಿಖಿತ ಸೂಚನೆ ನೀಡಿರುವ ಅವರು, ನಿಷ್ಕ್ರಿಯ ಉದ್ಯೋಗದ ಚೀಟಿ (ಜಾಬ್ ಕಾರ್ಡ್)ಗಳನ್ನು ರದ್ದು ಮಾಡಲಾಗಿದೆ. ಆದರೆ ಬಡ ಗ್ರಾಮೀಣ ಕುಟುಂಬಗಳಿಗೆ ಅನ್ಯಾಯವಾಗದಂತೆ ಎಚ್ಚರವಹಿಸಿ ಎಂದು ತಿಳಿಸಿದ್ದಾರೆ.

ಹೊಸದಾಗಿ ಉದ್ಯೋಗ ಬಯಸುವ ಅರ್ಹ ಗ್ರಾಮೀಣ ಕುಟುಂಬಗಳ ಫಲಾನುಭವಿಗಳಿಗೆ ಅಂದರೆ ಪರಿಶಿಷ್ಟ ಜಾತಿ, ಪಂಗಡದವರು, ಅಲ್ಪಸಂಖ್ಯಾತರು, ವಿಶೇಷ ಚೇತನರು, ಮಹಿಳಾ ನೇತೃತ್ವದ ಕುಟುಂಬದವರು, ಭೂ ರಹಿತ ಕೂಲಿ ಕಾರ್ಮಿಕರು ಸೇರಿದಂತೆ ಉದ್ಯೋಗ ಕೇಳುವ ಅರ್ಹರಿಗೆ ತತ್ ಕ್ಷಣವೇ ಜಾಬ್ ಕಾರ್ಡ್ ನೀಡಲು 5927 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಂದು ವಾರದೊಳಗಾಗಿ ಜಾಬ್ ಕಾರ್ಡ್ ಮೇಳ ನಡೆಸಿ, ಉದ್ಯೋಗ ನೀಡಿ ಎಂದು ನಿರ್ದೇಶನ ನೀಡಿದ್ದಾರೆ.


ಉದಯವಾಹಿನಿ ಚಿತ್ರ

> ಹಣದ ಕೊರತೆ ಇಲ್ಲದಿದ್ದಾಗ್ಯೂ ಕೆಲವು ಗ್ರಾಮ ಪಂಚಾಯತಿಗಳಲ್ಲಿ ವಿಬಿಜಿ ರಾಮ್ ಜಿ ಅನುಷ್ಠಾನ ತೃಪ್ತಿದಾಯಕವಾಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದಿರುವ ಈಶ್ವರ ಖಂಡ್ರೆ, ಗ್ರಾಮೀಣ ಜನತೆಗೆ ಉದ್ಯೋಗ ಖಾತ್ರಿ ಒದಗಿಸುವಂತೆ ಸೂಚಿಸಿದ್ದಾರೆ.
> ಸಚಿವ ಈಶ್ವರ ಬಿ ಖಂಡ್ರೆ

ವಿ ಬಿಜಿ ರಾಮ್ ಜಿ ಅಡಿ ಕೇಂದ್ರದ ಶೇ.60ರಷ್ಟು ಅನುದಾನ 1700 ಕೋಟಿ ರೂ. ಹಾಗೂ ರಾಜ್ಯದ ಶೇ.40ರಷ್ಟು ಅನುದಾನ 1200 ಕೋಟಿ ರೂ. ಸೇರಿ ಒಟ್ಟು 2900 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು, ಈ ಪೈಕಿ ಕೂಲಿ ನೀಡಿಕೆಗಾಗಿ ರಾಜ್ಯದ ಗ್ರಾಮ ಪಂಚಾಯತಿಗಳಿಗೆ 1000 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

## ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಭೀಕರ ಅಪಘಾತ

• ಉದಯವಾಹಿನಿ, ಬೆಂಗಳೂರು

ಬಿಡದಿ ವ್ಯಾಪ್ತಿಯ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಶನಿವಾರ ಮುಂಜಾನೆ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಸೇರಿದ ಬಸ್ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ನಡೆದಿದೆ.

ಬೆಂಗಳೂರು-ಮೈಸೂರು ದಶಪಥ ಎಕ್ಸ್‌ಪ್ರೆಸ್ ವೇನಲ್ಲಿ ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ನಿಯಂತ್ರಣ ತಪ್ಪಿ ಹೆದ್ದಾರಿ ಪಕ್ಕದಲ್ಲಿದ್ದ ಬೃಹತ್ ಶೈನಿಂಗ್ (ಸೈನ್) ಬೋರ್ಡ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಈ ಭೀಕರ ಅಪಘಾತದಲ್ಲಿ ಬಸ್‌ನ ಚಾಲಕ ಮತ್ತು ಕಂಡಕ್ಟರ್ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಹಾಗೂ 14 ಕ್ಕೂ ಹೆಚ್ಚು ಪ್ರಯಾಣಿಕರು ತೀವ್ರವಾಗಿ ಗಾಯಗೊಂಡಿದ್ದಾರೆ ಎನ್ನಲಾಗಿದೆ.

ರಾಮನಗರ ತಾಲ್ಲೂಕಿನ ಬಿಡದಿ ಪೊಲೀಸ್ ಠಾಣಾ ವ್ಯಾಪ್ತಿಯ ಅವರಗೆರೆ ಗೇಟ್ ಬಳಿ ಈ ದುರ್ಘಟನೆ ಸಂಭವಿಸಿದ್ದು, ಅಪಘಾತಗೊಂಡ ಬಸ್ ಕೇರಳದ ಕೋಝಿಕ್ಕೋಡ್‌ನಿಂದ ಬೆಂಗಳೂರಿನ ಕಡೆಗೆ ಬರುತ್ತಿತ್ತು. ಇನ್ನು, ಮೃತರನ್ನು ಚಾಲಕ ಮಿಥಿಲೇಶ್ ಮತ್ತು ಕಂಡಕ್ಟರ್ ಅರುಣ್ ಎಂದು ಗುರುತಿಸಲಾಗಿದೆ.

ಮುಂಜಾನೆ ಚಾಲನೆ ಮಾಡುವಾಗ ಚಾಲಕನಿಗೆ ನಿದ್ದೆಯ ಮಂಪು ಆವರಿಸಿದ್ದೇ ಈ ದುರಂತಕ್ಕೆ ಪ್ರಾಥಮಿಕ ಕಾರಣ ಎಂದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅದರಂತೆ, ನಿದ್ದೆಯ ಮಂಪರಿನಲ್ಲಿ ಬಸ್ ರಸ್ತೆಯ ಎಡಭಾಗಕ್ಕೆ ಚಲಿಸಿ, ಅಲ್ಲಿ ಅಳವಡಿಸಲಾಗಿದ್ದ ಬೃಹತ್ ಕಬ್ಬಿಣದ ಸೈನ್ ಬೋರ್ಡ್ ಕಂಬಕ್ಕೆ ಜೋರಾಗಿ ಡಿಕ್ಕಿ ಹೊಡೆದಿದೆ. ಈ ವೇಳೆ ಡಿಕ್ಕಿಯ ರಭಸಕ್ಕೆ ಆ ದೊಡ್ಡ ಸೈನ್ ಬೋರ್ಡ್ ಸಂಪೂರ್ಣವಾಗಿ ಕುಸಿದು ಬಿದ್ದಿದ್ದು, ಬಸ್ ಹೆದ್ದಾರಿಯಲ್ಲೇ ಒಂದು ಸೈಡ್‌ಗೆ ಪಲ್ಟಿಯಾಗಿದೆ.

# ಮುಖ್ಯಮಂತ್ರಿ ತೀರ್ಮಾನಕ್ಕೆ ನಾನು ಬದ್ಧ: ಸಚಿವ ಹೆಚ್.ಸಿ. ಬಾಲಕೃಷ್ಣ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಏನೇ ತೀರ್ಮಾನ ತೆಗೆದುಕೊಂಡರೂ ಅದಕ್ಕೆ ನಾವು ಬದ್ಧರಾಗಿದ್ದೇವೆ.ಪಕ್ಷದ ಹಿತದೃಷ್ಟಿಯಿಂದ ನಾವು ಅದಕ್ಕೆ ತಲೆಬಾಗುತ್ತೇವೆ ಎಂದು ಸಚಿವ ಹೆಚ್.ಸಿ. ಬಾಲಕೃಷ್ಣ ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನ ವಿಜಯನಗರದ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ,ಅಧಿಕಾರ ಕೊಟ್ಟವರು ಮುಖ್ಯಮಂತ್ರಿ. ಅವರ ತೀರ್ಮಾನಕ್ಕೆ ತಲೆ ಬಾಗುತ್ತೇನೆ ಎಂದು ಹೇಳಿದರು. ವಿಜಯನಗರ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ನಮ್ಮ ಪಕ್ಷದ ಪ್ರಮುಖ ಹಾಗೂ ಪವರ್‌ಫುಲ್ ಮುಖಂಡರು. ನಮ್ಮ ಪಕ್ಷದಲ್ಲಿ 100ಕ್ಕೂ ಹೆಚ್ಚು ಪವರ್‌ಫುಲ್ ಶಾಸಕರಿದ್ದಾರೆ. ಆದರೆ, ಸಚಿವ ಸ್ಥಾನ ನೀಡಲು 33 ಮಂದಿಗೆ ಮಾತ್ರ ಅವಕಾಶವಿದೆ.


ಉದಯವಾಹಿನಿ ಚಿತ್ರ

ಹೀಗಾಗಿ ಎಲ್ಲರೂ ಹೊಂದಿಕೊಂಡು ಹೋಗಬೇಕಾಗಿದೆ.ಇಂದು ಏನಾದರೂ ತಪ್ಪಾಗಿದೆ ಎಂದರೆ, ಮುಂದೆ ಒಳ್ಳೆಯದು ಆಗಬಹುದು. ಈಗ ನಮಗೆ ತೊಂದರೆಯಾಗಿದ್ದರೆ, ಮುಂದಿನ ದಿನಗಳಲ್ಲಿ ಒಳ್ಳೆಯ ಅವಕಾಶ ಕಾದಿರಬಹುದು ಎಂಬ ಭಾವನೆಯಿಂದ ಕೆಲಸ ಮಾಡಬೇಕು. ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಈ ವಿಚಾರವನ್ನು ತೀರ್ಮಾನ ಮಾಡುತ್ತಾರೆ ಎಂದು ತಿಳಿಸಿದರು.

ನಾಳೆಯಿಂದ ಜೆಡಿಎಸ್ ನಿಂದ ಬಿಡದಿ ಪಾದಯಾತ್ರೆ ನಡೆಯುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು,ಪಾದಯಾತ್ರೆಯಲ್ಲಿ ಭಾಗವಹಿಸುವವರು ಆ ಭಾಗದ ರೈತರಲ್ಲ. ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಪಾದಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ,ಇದು ಪಾದಯಾತ್ರೆಯಲ್ಲ, ಪ್ರಾಯಶ್ಚಿತ್ತ ಯಾತ್ರೆ ಎಂದು ಟೀಕಿಸಿದರು.ಬಿಡದಿ ಟೌನ್‌ಶಿಪ್ ಯೋಜನೆ ಕುಮಾರಸ್ವಾಮಿ ಹಾಗೂ ಯಡಿಯೂರಪ್ಪ ಕಾಲದಲ್ಲೇ ಆರಂಭವಾಗಿತ್ತು.

ಕೇಂದ್ರ ಸಚಿವ ಕುಮಾರಸ್ವಾಮಿ ಎರಡನೇ ಭಾರಿ ಮುಖ್ಯಮಂತ್ರಿಯಾಗಿದ್ದಾಗಲೂ ಈ ಯೋಜನೆಯನ್ನು ಕೈಬಿಡಬಹುದಿತ್ತು. ಆದರೆ ಸ್ಥಳೀಯ ರೈತರು ಮನವಿ ಮಾಡಿದಾಗ,ಇದು ತಮ್ಮ ಕನಸಿನ ಕೂಸು ಎಂದು ಹೇಳಿ ಯೋಜನೆಯನ್ನು ಮುಂದುವರಿಸುವುದಾಗಿ ತಿಳಿಸಿದ್ದರು ಎಂದು ಹೇಳಿದರು.

## ಹಿಂದಿ ಮಾತನಾಡದ್ದಕ್ಕೆ ಡೆಲಿವರಿ ಬಾಯ್ ಮೇಲೆ ಪುಂಡರಿಂದ ಹಿಗ್ಗಾಮುಗ್ಗಾ ಹಲ್ಲೆ! ಕೇಸ್ ದಾಖಲು

• ಉದಯವಾಹಿನಿ, ಬೆಂಗಳೂರು

ಮಹಾನಗರದಲ್ಲಿ ಹಿಂದಿವಾಲಗಳ ಹಾವಳಿ ಇನ್ನೂ ನಿಂತಿಲ್ಲ. ಕನ್ನಡಿಗರ ಮೇಲೆ ದರ್ಪ ಮುಂದುವರಿದಿದೆ. ಹಿಂದಿ ಮಾತನಾಡದ್ದಕ್ಕೆ ಡೆಲಿವರಿ ಬಾಯ್ ಮೇಲೆ ಹಲ್ಲೆ ನಡೆದಿದೆ. ನಗರದ ಯಲಹಂಕ ನ್ಯೂ ಟೌನ್‌ನಲ್ಲಿ ಈ ಘಟನೆ ನಡೆದಿದೆ. 25 ವರ್ಷದ ಡೆಲಿವರಿ ಬಾಯ್ ಮೇಲೆ ಗುಂಪೊಂದು ನಿಂದಿಸಿ, ದೊಣ್ಣೆಯಿಂದ ಹಲ್ಲೆ ನಡೆಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತನನ್ನು ಬಸವರಾಜ್ ಎಂದು ಗುರುತಿಸಲಾಗಿದೆ. ವಿದ್ಯಾಭ್ಯಾಸದ ಜೊತೆಗೆ ಕ್ವಿಕ್-ಕಾಮರ್ಸ್' ಡೆಲಿವರಿ ಪ್ಲಾಟ್‌ಫಾರ್ಮ್ ಒಂದರಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಬಸವರಾಜ್ ಆರ್ಡರ್ ಒಂದನ್ನು ತಲುಪಿಸಿದ ನಂತರ ಯಲಹಂಕ ನ್ಯೂ ಟೌನ್‌ನ 4ನೇ ಹಂತದಿಂದ ಸಂತೋಷ್ 4.40 ರ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ತ್ಯಾಜ್ಯ ತೆರವುಗೊಳಿಸದಿದ್ದರೆ ಸರ್ಕಾರಿ ಇಲಾಖೆಗಳಿಗೆ ನೋಟೀಸ್: ಸಚಿವ ಕೃಷ್ಣ ಬೈರೇಗೌಡ

## ಎಷ್ಟೇ ಸಣ್ಣ ಸಮಸ್ಯೆಯಾಗಿದ್ದರೂ, ಇಲಾಖೆಗಳ ನಡುವೆ ಉತ್ತಮ ಸಮನ್ವಯದ ಮೂಲಕ ಅದನ್ನು ತ್ವರಿತವಾಗಿ ಪರಿಹರಿಸಬೇಕು

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ 'ತ್ಯಾಜ್ಯ ಮುಕ್ತ ಅಭಿಯಾನ'ಕ್ಕೆ ವೇಗ ದೊರೆಯುತ್ತಿರುವ ಬೆನ್ನಲ್ಲೇ, ಸ್ವಚ್ಛತೆ ಹಾಗೂ ತ್ಯಾಜ್ಯ ತೆರವು ಕಾರ್ಯಗಳನ್ನು ಕೈಗೊಳ್ಳದ ಸರ್ಕಾರಿ ಇಲಾಖೆಗಳ ವಿರುದ್ಧ ನೋಟಿಸ್ ಜಾರಿ ಮಾಡುವಂತೆ ಐದು ನಗರ ಪಾಲಿಕೆಗಳ ಆಯುಕ್ತರಿಗೆ ಬೆಂಗಳೂರು ನಗರ ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಅಭಿಯಾನದ ಕುರಿತು ನಡೆದ ವರ್ಚುವಲ್ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಚಿವರು, ನಗರದ ಎಲ್ಲಾ ಸರ್ಕಾರಿ ಕಚೇರಿಗಳು ತಮ್ಮ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಗ್ರಹವಾಗಿರುವ ತ್ಯಾಜ್ಯವನ್ನು ಕಡ್ಡಾಯವಾಗಿ ತೆರವುಗೊಳಿಸಬೇಕು ಎಂದು ಹೇಳಿದರು.

ಎಷ್ಟೇ ಸಣ್ಣ ಸಮಸ್ಯೆಯಾಗಿದ್ದರೂ, ಇಲಾಖೆಗಳ ನಡುವೆ ಉತ್ತಮ ಸಮನ್ವಯದ ಮೂಲಕ ಅದನ್ನು ತ್ವರಿತವಾಗಿ ಪರಿಹರಿಸಬೇಕು ಎಂದು ಹೇಳಿದರು. ಮಳೆಗಾಲದಲ್ಲೂ ನಿಗದಿತ ಕ್ವಾರಿ ಸ್ಥಳಗಳಲ್ಲಿ ತ್ಯಾಜ್ಯ ವಿಲೇವಾರಿ ಕಾರ್ಯಕ್ಕೆ ಯಾವುದೇ ಅಡ್ಡಿಯಾಗದಂತೆ ನೋಡಿಕೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು. ನಿರ್ಮಾಣ ಮತ್ತು ಕೆಡವುವಿಕೆ ತ್ಯಾಜ್ಯವನ್ನು ಸರ್ಕಾರ ನಿಗದಿಪಡಿಸಿರುವ ಸ್ಥಳಗಳಲ್ಲಿಯೇ ವಿಲೇವಾರಿ ಮಾಡಬೇಕು ಎಂದು ಅವರು ಸ್ಪಷ್ಟಪಡಿಸಿದರು. ಸ್ವಚ್ಛಗೊಳಿಸಿರುವ ಸ್ಥಳಗಳಲ್ಲಿ ಮತ್ತೆ ಅಕ್ರಮವಾಗಿ ತ್ಯಾಜ್ಯ ಸುರಿಯದಂತೆ ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳುವಂತೆಯೂ ಅವರು ಅಧಿಕಾರಿಗಳಿಗೆ ಸೂಚಿಸಿದರು.

1 ಸುರಿಯುವ ಸ್ಥಳಗಳ ಗುರುತು

2 ಇಲಾಖೆಗಳ ವಿರುದ್ಧ ನೋಟಿಸ್

3 ನಿರ್ಮಾಣ ಮತ್ತು ಕೆಡವುವಿಕೆ


ಉದಯವಾಹಿನಿ ಚಿತ್ರ

ನಿಗದಿತ ತ್ಯಾಜ್ಯ ವಿಲೇವಾರಿ ಸ್ಥಳಗಳಲ್ಲಿ ಕಾರ್ಯಾಚರಣೆಯ ಮೇಲ್ವಿಚಾರಣೆಗಾಗಿ ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ. ಅವರಿಗೆ ಆಶ್ರಯ, ಕುಡಿಯುವ ನೀರು ಮತ್ತು ಆಹಾರದ ವ್ಯವಸ್ಥೆ ಮಾಡುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು. ಟಿಪ್ಪರ್ ಲಾರಿಗಳು ಸ್ಥಳಕ್ಕೆ ಆಗಮಿಸುವ ಮತ್ತು ಅಲ್ಲಿಂದ ನಿರ್ಗಮಿಸುವ ವಿವರಗಳನ್ನು ಸರಿಯಾಗಿ ದಾಖಲಿಸುವಂತೆಯೂ ಅವರು ಸೂಚಿಸಿದರು. ಪ್ರಸ್ತುತ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ತ್ಯಾಜ್ಯ ತೆರವು ಕಾರ್ಯಾಚರಣೆಗೆ 54 ಟಿಪ್ಪರ್ ಲಾರಿಗಳು ಮತ್ತು 18 ಅರ್ಥ್ ಮೂವರ್‌ಗಳನ್ನು ನಿಯೋಜಿಸಲಾಗಿದೆ.

> ಅಭಿಯಾನ ಯಶಸ್ವಿಯಾಗಿ ನಡೆಯುತ್ತಿದ್ದು, ದಿನದಿಂದ ದಿನಕ್ಕೆ ವೇಗ ಪಡೆದುಕೊಳ್ಳುತ್ತಿದೆ. ಆಗಸ್ಟ್ 1ರಿಂದ ಆಗಸ್ಟ್ 6ರವರೆಗೆ ನಗರದ 453 ಸಾರ್ವಜನಿಕ ಸ್ಥಳಗಳಿಂದ 10,056 ಟನ್ ನಿರ್ಮಾಣ ಮತ್ತು ಕೆಡವುವಿಕೆ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ ಎಂದು ಹೇಳಿದರು.-ಸಚಿವ ಕೃಷ್ಣ ಬೈರೇಗೌಡ

**ಅಕ್ರಮ ತ್ಯಾಜ್ಯ**

ನಗರದಾದ್ಯಂತ ನಿರ್ಮಾಣ ಮತ್ತು ಕೆಡವುವಿಕೆ ತ್ಯಾಜ್ಯವನ್ನು ಅಕ್ರಮವಾಗಿ ಸುರಿಯಲಾಗುತ್ತಿದ್ದ 3,022 ಸ್ಥಳಗಳನ್ನು ಅಧಿಕಾರಿಗಳು ಮತ್ತು ಮಾರ್ಷಲ್‌ಗಳು ಇದುವರೆಗೆ ಗುರುತಿಸಿದ್ದಾರೆ. ಈ ಸ್ಥಳಗಳಲ್ಲಿ ಅಂದಾಜು 59,823 ಟನ್ ತ್ಯಾಜ್ಯವಿದೆ ಎಂದು ಅಂದಾಜಿಸಲಾಗಿದೆ.

**ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ**

ತ್ಯಾಜ್ಯ ಮುಕ್ತ ಅಭಿಯಾನದಲ್ಲಿ ತೊಡಗಿರುವ ವಾಹನಗಳು ಸಮಯದಲ್ಲೂ ಕಾರ್ಯನಿರ್ವಹಿಸಲು ಅವಕಾಶ ನೀಡುವ ಕುರಿತು ಹಿರಿಯ ಸಂಚಾರ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯ ಆಯುಕ್ತರಿಗೆ ಸೂಚಿಸಿದ್ದೇನೆ ಎಂದು ಹೇಳಿದರು.

## ಪ್ರವಾಸಿಗರಿಗೆ 7 ಘಂಟೆಗಳ ಕಾಲ ನಂದಿಹಿಲ್ಸ್‌ಗೆ ನೋ ಎಂಟ್ರಿ

• ಉದಯವಾಹಿನಿ, ಚಿಕ್ಕಬಳ್ಳಾಪುರ

ವೀಕೆಂಡ್ ಬಂತು ಅಂದ್ರೆ, ಸಾಕು ಸಿಲಿಕಾನ್ ಸಿಟಿ ಜನರ ಫೇವರಿಟ್ ತಾಣಗಳ ಪೈಕಿ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಆದ್ರೆ, ಈ ಬಾರಿ ಏನಾದ್ರು ನಂದಿಬೆಟ್ಟಕ್ಕೆ ವೀಕೆಂಡ್ ಪ್ಲಾನ್ ಮಾಡಿದ್ರೆ, ಆ ಪ್ಲಾನ್ ಚೇಂಜ್ ಮಾಡೋದು ಬೆಸ್ಟ್! ಯಾಕಂದ್ರೆ, ನಂದಿಬೆಟ್ಟದಲ್ಲಿ ಮಾನ್ಸೂನ್ ಮ್ಯಾರಥಾನ್ ಹಿನ್ನೆಲೆಯಲ್ಲಿ ವಾಹನಗಳ ಸಂಚಾರವನ್ನು ನಿಷೇಧಿಸಿ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಆದೇಶ ಹೊರಡಿಸಿದೆ.

ಹೌದು, ಆಗಸ್ಟ್ 9ರ ಭಾನುವಾರ ನಂದಿಬೆಟ್ಟದಲ್ಲಿ ಮಾನ್ಸೂನ್ ಮ್ಯಾರಥಾನ್ ಆಯೋಜಿಸಿರುವುದರಿಂದ ಮುಂಜಾನೆ 3:00 ಗಂಟೆಯಿಂದ ಬೆಳಗ್ಗೆ 10:00 ಗಂಟೆಯವರೆಗೆ ಪ್ರವಾಸಿಗರ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಮ್ಯಾರಥಾನ್ ಓಟಗಾರರ ಸುರಕ್ಷತೆಗಾಗಿ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಈ ಜಂಟಿ ಆದೇಶ ಹೊರಡಿಸಿದೆ.

ನಂದಿಬೆಟ್ಟದ ಪಾದದಿಂದ ಬೆಟ್ಟದ ಮೇಲಕ್ಕೆ ಹೋಗುವ ಎಲ್ಲಾ ರೀತಿಯ ಖಾಸಗಿ ವಾಹನಗಳ (ಬೈಕ್ ಮತ್ತು ಕಾರುಗಳು) ಸಂಚಾರವನ್ನು ನಿರ್ಬಂಧಿಸಲಾಗಿದೆ. ಅದರಂತೆ, ಮ್ಯಾರಥಾನ್ ಮುಗಿಯುವವರೆಗೆ ಸಾರ್ವಜನಿಕರು ಮತ್ತು ಪ್ರವಾಸಿಗರು ಬೆಟ್ಟದ ರಸ್ತೆಗೆ ಪ್ರವೇಶಿಸುವಂತಿಲ್ಲ.

ನಂದಿಬೆಟ್ಟದಲ್ಲಿ ಹಮ್ಮಿಕೊಳ್ಳಲಾಗಿರುವ ಮಾನ್ಸೂನ್ ಮ್ಯಾರಥಾನ್ 2026 ನಲ್ಲಿ 21 ಕಿಲೋಮೀಟರ್, 10 ಕಿಲೋಮೀಟರ್ ಮತ್ತು 5 ಕಿಲೋಮೀಟರ್ ಓಟದ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಸುಮಾರು 4,500ಕ್ಕೂ ಹೆಚ್ಚು ಕ್ರೀಡಾಪಟುಗಳು ಮ್ಯಾರಥಾನ್‌ನಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು, ಭಾಗವಹಿಸುವವರು ನಂದಿಬೆಟ್ಟದ ಪಾದದಿಂದ ಆರಂಭವಾಗಿ ಕಡಿದಾದ ತಿರುವುಗಳ ರಸ್ತೆಯ ಮೂಲಕ ಬೆಟ್ಟದ ಮೇಲ್ಭಾಗದವರೆಗೂ ಓಟಗಾರರು ಸಾಗಲಿದ್ದಾರೆ.

ಅದರಂತೆ, ಮ್ಯಾರಥಾನ್‌ಗೆ ಡಿಸಿಎಂ ಜಿ. ಪರಮೇಶ್ವರ್ ಚಾಲನೆ ನೀಡಲಿದ್ದಾರೆ.

## ಚಾಮುಂಡೇಶ್ವರಿ ಉತ್ಸವಕ್ಕೆ ತಾಯಿ ಮಗ ಚಾಲನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ಆಷಾಢ ಮಾಸದ ಕಡೆ ಶುಕ್ರವಾರದ ಪ್ರಯುಕ್ತ ಮೈಸೂರು ರೂಪನಗರದ ಜೋಡಿರಸ್ತೆಯ ಆವರಣದಲ್ಲಿ ಸರ್ವ ಅಲಂಕಾರಗಳಿಂದ ಕಂಗೊಳಿಸುತ್ತಿದ್ದ ಚಾಮುಂಡೇಶ್ವರಿ ದೇವಿಗೆ ಜಯಘೋಷ ಮೊಳಗಿಸಿ, ಅರಿಶಿಣ ಕುಂಕುಮ ಹಚ್ಚಿ, ಹೂವು ಮಂತ್ರಾಕ್ಷತೆ ಅರ್ಪಿಸಿ ಚಾಮುಂಡೇಶ್ವರಿ ಪೂಜಾ ಮತ್ತು ಅನ್ನದಾನ ಕಾರ್ಯಕ್ರಮಕ್ಕೆ ಮಾತೃ ಶ್ರೀ ಚೂಡಾರತ್ನಮ್ಮನವರು ಹಾಗೂ ಕಲಿಯುಗದ ಶ್ರವಣಕುಮಾರ ಡಿ.ಕೃಷ್ಣಕುಮಾರ್ ಚಾಲನೆ ನೀಡಿದರು ಆಯೋಜಕರಾದ ಶ್ರೀಮತಿ ವಿಮಲಶ್ರೀ ಹಾಗೂ ಸ್ಥಳೀಯರು ಜೊತೆಯಲ್ಲಿದ್ದರು.

# ತೆರಿಗೆ ಇಲಾಖೆಯಿಂದ ನೋಟಿಸ್ ಬಂದರೆ ಆತಂಕಪಡುವ ಅಗತ್ಯವಿಲ್ಲ

## ತೆರಿಗೆ ಇಲಾಖೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡಿರುವುದರಿಂದ ತೆರಿಗೆದಾರರಿಗೆ ಸಾಕಷ್ಟು ಅನುಕೂಲವಾಗಿದೆ

• ಉದಯವಾಹಿನಿ, ಕೋಲಾರ

ತೆರಿಗ ಇಲಾಖೆಯಿಂದ ನೋಟಿಸ್ ಬಂದಾಗ ತೆರಿಗೆದಾರರು ಆತಂಕಪಡುವ ಅಗತ್ಯವಿಲ್ಲ. ನೋಟಿಸ್‌ಗೆ ಸಂಬಂಧಿಸಿದಂತೆ ಅಗತ್ಯ ದಾಖಲೆ ಹಾಗೂ ಮಾಹಿತಿಯನ್ನು ಇಲಾಖೆಗೆ ಸಲ್ಲಿಸುವ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಬಹುದಾಗಿದೆ ಎಂದು ಆದಾಯ ತೆರಿಗೆ ಇಲಾಖೆಯ ಜಂಟಿ ಆಯುಕ್ತೆ ಮೀರಾ ಪಂಡಿತ್ ತಿಳಿಸಿದರು.

ರಾಜ್ಯ ಮತ್ತು ಜಿಲ್ಲಾ ತೆರಿಗೆ ವೃತ್ತಿಪರರ ಸಂಘದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ನಗರ ಹೊರವಲಯದಲ್ಲಿನ ಮುಳಬಾಗಿಲು ಮಾರ್ಗದ ರಾಷ್ಟ್ರೀಯ ಹೆದ್ದಾರಿಯಲ್ಲಿನ ಎಸ್.ಕೆ ಇಂಟರ್‌ನ್ಯಾಷನಲ್ ಇನ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ತೆರಿಗೆದಾರರ ಸಮ್ಮೇಳನ ಹಾಗೂ ತೆರಿಗೆ ವೃತ್ತಿಪರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ನೋಟಿಸ್ ಎಂಬುದು ಇಲಾಖೆಯ ತೆರಿಗೆವೃತ್ತಿಪರರನ್ನು ಸಂಪರ್ಕಿಸಿ ನಿಖರ ಮಾಹಿತಿ ಪಡೆಯಲು ಇರುವ ಸಾಧನ ಅಷ್ಟೆ ಇದಕ್ಕೆ ಗ್ರಾಹಕರು ಭಯಪಡುವ ಅವಶ್ಯಕತೆ ಇಲ್ಲ ಎಂದರು.

ತೆರಿಗೆ ಇಲಾಖೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡಿರುವುದರಿಂದ ತೆರಿಗೆದಾರರಿಗೆ ಸಾಕಷ್ಟು ಅನುಕೂಲವಾಗಿದೆ. ನೋಟಿಸ್‌ಗಳಿಗೆ ಉತ್ತರ ಹಾಗೂ ಅಗತ್ಯ ದಾಖಲೆಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬಹುದಾಗಿದ್ದು, ಪ್ರತಿಯೊಂದು ವಿಚಾರಕ್ಕೂ ಕಚೇರಿಗೆ ತೆರಳಿ ದಾಖಲೆ ಸಲ್ಲಿಸುವ ಅಗತ್ಯವಿಲ್ಲ. ತೆರಿಗೆ ಸಲಹೆಗಾರರು ಮತ್ತು ತೆರಿಗೆದಾರರು ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಂಡು ವ್ಯವಸ್ಥೆಯನ್ನು ಸರಳಗೊಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಉದಯವಾಹಿನಿ ಚಿತ್ರ

ಗುತ್ತಿಗೆದಾರ ಹಾಗೂ ಶಿಕ್ಷಣದ್ಯೋಮಿ ವಿ.ಕೃಷ್ಣರೆಡ್ಡಿ ಮಾತನಾಡಿ, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೆರವು ನೀಡುವ ಉದ್ದೇಶ ವ್ಯಕ್ತಪಡಿಸಿ ಪ್ರತಿ ವರ್ಷ ಇಬ್ಬರು ಬಡ ಹೆಣ್ಣು ಮಕ್ಕಳನ್ನು ಆಯ್ಕೆ ಮಾಡಿಕೊಂಡು ಅವರ ಶಿಕ್ಷಣಕ್ಕೆ ನೆರವು ನೀಡಿ, ಅವರು ವಿದ್ಯಾಭ್ಯಾಸ ಪೂರ್ಣಗೊಳಿಸಿದ ಬಳಿಕ ಉದ್ಯೋಗಕ್ಕೆ ಸೇರ್ಪಡೆಯಾಗಲು ಸಹಕಾರ ನೀಡುತ್ತಿದ್ದೇನೆ. ಇದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು. ರಾಜ್ಯ ಸಂಘದ ಅಧ್ಯಕ್ಷ ಎಸ್.ನಂಜುಂಡಪ್ರಸಾದ್ ಮಾತನಾಡಿ ತೆರಿಗೆ ವೃತ್ತಿಪರರ 50ನೇ ಸಮ್ಮೇಳನದ ವಜ್ರ ಮಹೋತ್ಸವದ ಈ ಕಾರ್ಯಕ್ರಮವನ್ನು ಚಿನ್ನದ ನಾಡಿನ ಕೋಲಾರದಲ್ಲಿ ಆಯೋಜಿಸಿರುವುದು ಹರ್ಷದಾಯಕವಾಗಿದೆ ಎಂದ ಅವರು ತೆರಿಗೆಸಲಹೆಗಾರರು ಸಂಘಟಿತರಾಗಬೇಕು. ನಾವು ಸಂಘಟಿತರಾದರೆ ತೆರಿಗೆ ವಂಚನೆ ತಪ್ಪಿಸಬಹುದು. ಸಮಯಕ್ಕೆ ಸರಿಯಾಗಿ ತೆರಿಗೆ ಪಾವತಿಸುವ ಮೂಲಕ ದಂಡ ತಪ್ಪಿಸಬಹುದು. ಈ ಎಲ್ಲಾ ಸೌಲಭ್ಯಗಳ ಅರಿವು ಮೂಡಿಸುವುದು ಈ ಸಮಾವೇಶದ ಉದ್ದೇಶವಾಗಿದೆ ಎಂದರು.

ಎಲ್ಲಾ ತೆರಿಗೆ ಸಲಹೆಗಾರರನ್ನು ಆಹ್ವಾನಿಸಿ ಶೈಕ್ಷಣಿಕ ವಿಚಾರಕ್ಕೆ ಒತ್ತು ನೀಡಿ ಆದಾಯ ತೆರಿಗೆ, ಜಿಎಸ್‌ಟಿ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರಗೋಷ್ಠಿ ಹಮ್ಮಿಕೊಳ್ಳಲಾಗುತ್ತಿದೆ.

> ಇಂದಿನ ಬದಲಾಗುತ್ತಿರುವ ತೆರಿಗೆ ವ್ಯವಸ್ಥೆ ಹಾಗೂ ಹೊಸ ತಂತ್ರಜ್ಞಾನಗಳ ಹಿನ್ನಲೆಯಲ್ಲಿ ತೆರಿಗೆ ಸಲಹೆಗಾರರಿಗೆ ನಿರಂತರ ತರಬೇತಿ ಅಗತ್ಯವಿದೆ. ವಿಶೇಷವಾಗಿ ಮಹಿಳೆಯರು ಸಂಖ್ಯೆಯಲ್ಲಿ ತೆರಿಗೆ ವೃತ್ತಿಗಾರರ ಕ್ಷೇತ್ರವನ್ನು ಪ್ರವೇಶಿಸಿ ಇಂಥ ಅವಕಾಶಗಳನ್ನು ಸದ್ಬಳಿಸಿ ಕೊಳ್ಳಬೇಕು ಎಂದು ಕರೆ ನೀಡಿದರು.
> -ಜಂಟಿ ಆಯುಕ್ತೆ ಮೀರಾ ಪಂಡಿತ್

> ಸಂಘವು ಕೇವಲ ತೆರಿಗೆ ಸಂಬಂಧಿತ ವಿಚಾರಗಳಿಗೆ ಸೀಮಿತವಾಗಿಲ್ಲ. ಕೈಗಾರಿಕೋದ್ಯಮಿಗಳು ಸೇರಿದಂತೆ ವಿವಿಧ ವೃಂದಗಳ ಆರ್ಥಿಕ ಚಟುವಟಿಕೆಗಳಿಗೆ ತೆರಿಗೆ ಸಲಹೆಗಾರರು ಪ್ರಮುಖ ಕೊಂಡಿಯಾಗಿದ್ದಾರೆ. ತೆರಿಗೆದಾರರ ಸಹಕಾರದಿಂದಲೇ ರಾಜ್ಯ ಸರ್ಕಾರದ ಆಡಳಿತ ವ್ಯವಸ್ಥೆ ಸುಗಮವಾಗಿ ಸಾಗಲು ಸಾಧ್ಯವಾಗುತ್ತಿದೆ ಎಂದರು.
> -ಜಂಟಿ ಆಯುಕ್ತೆ ಮೀರಾ ಪಂಡಿತ್

**ಏಕಾಏಕಿ ನೋಟಿಸ್**

ದೇಶದ ಅಭಿವೃದ್ಧಿ ಆಗಬೇಕಾದರೆ ತೆರಿಗೆ ಪಾವತಿ ಒಂದು ಅಭಿಯಾನ ಆಗಬೇಕು. ತೆರಿಗೆ ಸಲಹೆಗಾರರು ಸರ್ಕಾರದ ಬೆನ್ನೆಲುಬು, ಸೇತುವೆ ಇದ್ದಂತೆ. ಆದರೆ ಇತ್ತೀಚೆಗೆ ಇಲಾಖೆಯಿಂದ ಗುತ್ತಿಗೆದಾರರಿಗ ಏಕಾಏಕಿ ನೋಟಿಸ್ ಬರುತ್ತಿದ್ದು, ಕಸಿವಿಸಿ ಆಗುತ್ತಿದೆ. ನೋಟಿಸ್ ಸ್ವಲ್ಪ ಕಡಿಮೆ ಮಾಡಬೇಕು. ಗುತ್ತಿಗೆದಾರರ ಈಗಿನ ಪರಿಸ್ಥಿತಿ ಸರಿ ಇಲ್ಲ ಎಂದು ಮನವಿ ಮಾಡಿದರು.

## ಮಿನಿ ನ್ಯೂಸ್

### ಆ.13ರ ಕರ್ನಾಟಕ ಬಂದ್ ಮುಂದೂಡಿಕೆ ಸೂಕ್ತ

• ಉದಯವಾಹಿನಿ, ಮೈಸೂರು

ತಮಿಳುನಾಡಿಗೆ ನೀರು ಬಿಡುವುದನ್ನು ವಿರೋಧಿಸಿ ಆಗಸ್ಟ್ 13 ರಂದು ಕರೆ ನೀಡಲಾಗಿರುವ ಕರ್ನಾಟಕ ಬಂದ್‌ಅನ್ನು ಮುಂದೂಡುವುದು ಸೂಕ್ತ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಾಗೂ ಕರ್ನಾಟಕ ನೆಲ ಜಲ ಸಂರಕ್ಷಣಾ ಸಮಿತಿ ಸಂಚಾಲಕ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ಕರ್ನಾಟಕ ನೆಲ ಜಲ ಪರಿಸರ ಸಂರಕ್ಷಣಾ ಸಮಿತಿ ಸಭೆಯ ಬಳಿಕ ಮಾತನಾಡಿದ ಅವರು, ಕಳೆದ ಒಂದು ವಾರದಲ್ಲಿ ಕಬಿನಿಯಿಂದ ಕನಿಷ್ಠ 15 ನೀರನ್ನು ತಮಿಳುನಾಡಿಗೆ ಬಿಡಲಾಗಿದೆ.

ಈಗಲೂ ಪ್ರತಿದಿನ ಹೆಚ್ಚುವರಿ ನೀರು ಬಿಡಲಾಗುತ್ತಿದೆ. ಸಿಡಬ್ಲ್ಯುಎಂಎ ಆದೇಶದಂತೆ 15 ದಿನದಲ್ಲಿ 4.5 ಬಿಡಬೇಕಿದ್ದರೂ ಅದಕ್ಕಿಂತ ಹೆಚ್ಚು ನೀರು ಹರಿಸಲಾಗಿದೆ ಎಂದರು. ಕೆ.ಆರ್.ಎಸ್ ಜಲಾಶಯದಲ್ಲಿ ನೀರು 106 ಅಡಿಗೆ ಏರಿಕೆಯಾಗಿದ್ದು, ಕಾಲುವೆಗಳಿಗೆ ನೀರು ಹರಿಸಲಾಗಿದೆ. ರೈತರು ವ್ಯವಸಾಯ ಚಟುವಟಿಕೆಯಲ್ಲಿ ತೊಡಗಿದ್ದಾರೆ. ರೈತರ ಮತ್ತು ಜನರ ಹಿತಕ್ಕಾಗಿ ಮಾಡುವ ಬಂದ್‌ಅನ್ನು ಸದ್ಯಕ್ಕೆ ಮುಂದೂಡುವುದು ಸೂಕ್ತ. ಚಳುವಳಿಗಾರರು ವಿಶಾಲ ತಳದಲ್ಲಿ ಚಿಂತನೆ ನಡೆಸಬೇಕು.

### ಸಾಧು ಸಂತರು, ಮಹಾಪುರುಷರು, ಸ್ವಾತಂತ್ರ್ಯ ಹೋರಾಟಗಾರ ಬಗ್ಗೆ ಅರಿವು ಅಗತ್ಯ: ಮರಿಯಾಲ ಶ್ರೀಗಳು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ

ವಿದ್ಯಾರ್ಥಿ ದೆಸೆಯಿಂದಲೇ ಮಕ್ಕಳಿಗೆ ಶಿಕ್ಷಣ ಜೊತೆಗೆ ಸಾಧು ಸಂತರು, ಮಹಾಪುರುಷರು, ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಸಾಧನೆ ಮತ್ತು ಜೀವನ ಚರಿತ್ರೆಯ ಬಗ್ಗೆ ಅರಿವು ಮೂಡಿಸುವ ಮೂಲಕ ಅವರಲ್ಲಿ ಸೃಜನ ಶೀಲತೆಯನ್ನು ಬೆಳೆಸಲು ಮುಂದಾಗಬೇಕು ಎಂದು ಶ್ರೀ ಮುರುಘರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ಮರಿಯಾಲದಲ್ಲಿರುವ ಶ್ರೀ ಮುರುಘರಾಜೇಂದ್ರಸ್ವಾಮಿ ಪಬ್ಲಿಕ್ ಶಾಲೆಯ ರಂಗ ಮಂಟಪದಲ್ಲಿ ಗುರುವಾರ ನಡೆದ ಛದ್ಮವೇಷ ಮತ್ತು ರಸಪ್ರಶ್ನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಕೇವಲ ಶಿಕ್ಷಣ ಕಲಿಸಿದರಷ್ಟೇ ಸಾಲದು. ಇಂಥ ವೇಷಭೂಷಣ ಸ್ಪರ್ಧೆಗಳು ಹಾಗೂ ರಸಪ್ರಶ್ನೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ, ಅವರನ್ನು ಮತ್ತಷ್ಟು ಚಿಂತನಾ ಶೀಲರನ್ನಾಗಿ ಮಾಡಿ, ಕಲಿಕೆಯ ಬಗ್ಗೆ ಆಸಕ್ತಿ ಮೂಡಿಸಬೇಕು. ಬೆಳೆಯುವ ಪೈರು ಮೊಳಕೆಯಲ್ಲಿ ನೋಡು ಎಂಬಂತೆ ಸಮಾಜಕ್ಕೆ ಕೊಡುಗೆ ನೀಡಿದಂತಹ ವ್ಯಕ್ತಿಗಳ ವೇಷ ಭೂಷಣಗಳನ್ನು ಮಕ್ಕಳಿಗೆ ಹಾಕುವುದರಿಂದ ಅವರಲ್ಲಿ ಅವರಂತೆ ನಾನು ಆಗಬೇಕು. ಸಮಾಜಕ್ಕೆ ಸೇವೆ ಸಲ್ಲಿಸಬೇಕೆಂಬ ಆಸೆ ಹೆಚ್ಚಾಗುತ್ತದೆ. ಈ ನಿಟ್ಟಿನಲ್ಲಿ ಈ ಎರಡು ಕಾರ್ಯಕ್ರಮಗಳು ಬಹಳ ಅರ್ಥಪೂರ್ಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

### ರಾಜ್ಯದಾಡ್ಯಂತ್ತ ಬರಪೀಡಿತ ಪ್ರದೇಶಗಳಿಗೆ ಸಚಿವರ ಭೇಟಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಪಿರಿಯಾಪಟ್ಟಣ

ರಾಜ್ಯದಾಡ್ಯಂತ್ತ ಬರಪೀಡಿತ ಪ್ರದೇಶಗಳಿಗೆ ಉಸ್ತುವಾರಿ ಸಚಿವರುಗಳು ಭೇಟಿ ನೀಡುತ್ತಿದ್ದು ವರದಿಯನ್ನು ಸರ್ಕಾರ ದ ಮುಂದೆ ಮಂಡಿಸಿ ನಂತರ ರೈತರ ಹಿತ ಕಾಪಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು. ತಾಲ್ಲೂಕಿನ ರಾವಂದೂರು ಗ್ರಾಮದ ಸಮೀಪದ ತಮ್ಮಡಹಳ್ಳಿ ಗ್ರಾಮದಲ್ಲಿ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ರೈತರ ಸಂಕಷ್ಟ ಆಲಿಸಿದ ಅವರು ಅಧಿಕಾರಿಗಳು ಸಾರ್ವಜನಿಕರ ಹಿತವನ್ನು ಕಾಪಾಡುವಲ್ಲಿ ಕೆಲಸ ನಿರ್ವಹಿಸಬೇಕು. ಮಳೆಯ ಅಭಾವದಿಂದಾಗಿ ರಾಜ್ಯದಲ್ಲಿ ಸಾರ್ವಜನಿಕರು ರೈತರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ ಇದನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳು ಸಾರ್ವಜನಿಕರ ಹಿತ ಕಾಯುವ ಕೆಲಸ ಮಾಡಬೇಕು. ಮುಖ್ಯಮಂತ್ರಿ ಡಿಕೆ ಶಿವಕುಮಾರ್ ರವರ ಆದೇಶದಂತೆ ರಾಜ್ಯದಾದ್ಯಂತ ಸಚಿವರುಗಳು ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ರೈತರಿಗೆ ಆಗಿರುವ ನಷ್ಟದ ಬಗ್ಗೆ ವರದಿ ಸಂಗ್ರಹ ಮಾಡುತ್ತಿದ್ದೇವೆ. ಈ ವರದಿಗಳನ್ನು ಸರ್ಕಾರದ ಮುಂದೆ ಮಂಡಿಸಿ ರೈತರಿಗೆ ಸಹಕಾರವಾಗುವ ಯೋಜನೆಗಳನ್ನು ಕೈಗೊಳ್ಳುತ್ತೇವೆ ರೈತರು ಯಾವುದೇ ಸಂದರ್ಭದಲ್ಲಿಯೂ ಧೃತಿ ಕೆಡಬಾರದು ಎಂದರು.ಶಾಸಕ ಕೆ ವೆಂಕಟೇಶ್ ಮಾತನಾಡಿ ತಾಲ್ಲೂಕಿನ ಜನತೆಗೆ ನೀರಾವರಿ ಸಮಸ್ಯೆ ಬಗೆಹರಿಸಲು 150 ಕೆರೆಗಳಿಗೆ ನೀರು ತುಂಬಿಸುವ ಬಹುದೊಡ್ಡ ಯೋಜನೆಯನ್ನು ಜಾರಿಗೊಳಿಸಲಾಗಿದ್ದು ಕೆರೆಗಳಿಗೆ ನೀರನ್ನು ಹಾಯಿಸುವ ಕೆಲಸವನ್ನು ಅಧಿಕಾರಿಗಳು ಮಾಡಿದ್ದಾರೆ.

## ವಾಣಿಜ್ಯ ಉದ್ದೇಶಕ್ಕೆ ಗೃಹಬಳಕೆ ಸಿಲಿಂಡರ್ ಬಳಸಿದರೆ ಕಾನೂನು ಕ್ರಮ: ತಹಶೀಲ್ದಾರ್

• ಉದಯವಾಹಿನಿ, ಹುಳಿಯಾರು

ಗೃಹಬಳಕೆಗೆ ಮೀಸಲಾದ 14.2 ಕೆ.ಜಿ. ತೂಕದ ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಚಿಕ್ಕನಾಯಕನಹಳ್ಳಿ ತಹಶೀಲ್ದಾರ್ ಮಮತಾ ಎಂ. ಎಚ್ಚರಿಕೆ ನೀಡಿದ್ದಾರೆ. ಸರ್ಕಾರದ ಆದೇಶದಂತೆ 14.2 ಕೆ.ಜಿ. ತೂಕದ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಮನೆ ಬಳಕೆಗೆ ಮಾತ್ರ ಉಪಯೋಗಿಸಬೇಕು. ಕೆಲವು ಹೋಟೆಲ್‌ಗಳು, ಟೀ ಅಂಗಡಿಗಳು, ಬೇಕರಿಗಳು, ರಸ್ತೆ ಬದಿಯ ಎಗ್ ರೈಸ್ ಅಂಗಡಿಗಳು, ಕೋಳಿ ಮಾಂಸದ ಅಂಗಡಿಗಳು ಹಾಗೂ ಇತರೆ ತಿಂಡಿ ವ್ಯಾಪಾರ ಕೇಂದ್ರಗಳಲ್ಲಿ ಗೃಹಬಳಕೆಯ ಸಿಲಿಂಡರ್‌ಗಳನ್ನು ಅಕ್ರಮವಾಗಿ ಬಳಸುತ್ತಿರುವುದು ಗಮನಕ್ಕೆ ಬಂದಿದೆ ಎಂದು ಅವರು ತಿಳಿಸಿದ್ದಾರೆ.

ಇಂತಹ ಅಕ್ರಮ ಬಳಕೆಯನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರವು ಪರಿಶೀಲನಾ ಕಾರ್ಯಾಚರಣೆ ನಡೆಸಲು ಸೂಚನೆ ನೀಡಿದ್ದು, ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿರುವ ಗೃಹಬಳಕೆಯ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳುವುದರ ಜತೆಗೆ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಆದೇಶಿಸಿದೆ.

## ಪರಮೇಶ್ವರ್ ಹುಟ್ಟುಹಬ್ಬ ಪ್ರಯುಕ್ತ ಶಿವಶೈಕ್ಷಣಿಕ ಆಶ್ರಮದ ಮಕ್ಕಳಿಗೆ ಸಿಹಿ, ಪಠ್ಯಪರಿಕರ ವಿತರಣೆ

• ಉದಯವಾಹಿನಿ, ತುಮಕೂರು

ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರ 75ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ನಗರದ ಹೊರವಲಯದ ಮೈದಾಳದ ಶಿವ ಶೈಕ್ಷಣಿಕ ಆಶ್ರಮದ ಮಕ್ಕಳೊಂದಿಗೆ ಆಚರಿಸಿದರು. ಆಶ್ರಮದ ಮಕ್ಕಳಿಗೆ ಸಿಹಿ, ಉಪಾಹಾರ ಬಡಿಸಿದರು. ಪಠ್ಯ ಪರಿಕರ ವಿತರಿಸಿ ತಮ್ಮ ನಾಯಕನ ಹುಟ್ಟು ಹಬ್ಬವನ್ನು ಸ್ಮರಣೀಯವಾಗಿ ಆಚರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿದ್ಯಾವಾಹಿನಿ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್.ಬಿ. ಪ್ರದೀಪ್‌ಕುಮಾರ್, ಡಾ.ಪರಮೇಶ್ವರ್ ಅವರು ಸಜ್ಜನ ಜನನಾಯಕರು. ಆರೋಗ್ಯ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿರುವ ಅವರು ಸ್ವತ ಕ್ರೀಡಾಪಟುವಾಗಿ ಕ್ರೀಡೆಯ ಉತ್ತೇಜನಕ್ಕೆ ಮಹತ್ವ ನೀಡಿದ್ದಾರೆ. ತುಮಕೂರು ಅಭಿವೃದ್ಧಿಗೆ ಪಣ ತೊಟ್ಟಿದ್ದಾರೆ. ತುಮಕೂರಿಗೆ ಮೆಟ್ರೋ ಸಂಪರ್ಕ ಒದಗಿಸಬೇಕೆಂದು ಹೆಚ್ಚು ಪ್ರಯತ್ನದಲ್ಲಿದ್ದಾರೆ. ಮೆಟ್ರೋ ಬಂದರೆ ತುಮಕೂರು, ಬೆಂಗಳೂರು ಮಾತ್ರವಲ್ಲ ಅದರ ನಡುವಿನ ಎಲ್ಲಾ ಹಳ್ಳಿಗಳೂ ಅಭಿವೃದ್ಧಿಯಾಗುತ್ತವೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

**ಅಭಿವೃದ್ಧಿಗೆ ವಿಶೇಷ ಕಾಳಜಿ**

ತಮ್ಮ ನೇತೃತ್ವದಲ್ಲಿ ರಾಜ್ಯ, ರಾಷ್ಟ್ರೀಯ ಕ್ರೀಡಾ ಕೂಟಗಳನ್ನು ಆಯೋಜಿಸಿ ತುಮಕೂರಿನ ಹೆಸರು ಅಂತಾರಾಷ್ಟ್ರೀಯ ಮಟ್ಟದಲ್ಲಿ ತುಮಕೂರು ಹೆಸರಾಗಲು ಕಾರಣರಾಗಿದ್ದಾರೆ. ತುಮಕೂರಿನ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಿದ್ದಾರೆ. ಇಂತಹ ನಾಯಕರ ಕೊಡುಗೆಯನ್ನು ಶ್ಲಾಘಿಸಬೇಕು ಎಂದು ತಿಳಿಸಿದರು.

ಚೆಸ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಟಿ,ಎನ್. ಮಧುಕರ್ ಮಾತನಾಡಿ, ಡಾ. ಪರಮೇಶ್ವರ್ ಅವರು ದೇಶದಲೇ ಅವರೂಪದ ಸಜ್ಜನಿಕೆಯ ಸಹನಾಶೀಲ ನಾಯಕರು, ಗೃಹ ಖಾತೆ ಮಂತ್ರಿಯಾಗಿದ್ದಾಗಲೂ ಇಲಾಖೆಯ ಒತ್ತಡವನ್ನು ತಾಳ್ಮೆ, ಸಹನೆಯಿಂದ ನಿಭಾಯಿಸಿದರು. ಆದರ್ಶ ರಾಜಕೀಯ ನಾಯಕರು ಹೇಗಿರಬೇಕು ಎಂಬುದಕ್ಕೆ ಡಾ.ಪರಮೇಶ್ವರ್ ಅವರು ಉತ್ತಮ ಉದಾಹರಣೆ.

ಇವರ ರಾಜಕೀಯ ಬದುಕು ಯುವ ರಾಜಕಾರಣಿಗಳಿಗೆ ಪ್ರೇರಣೆಯಾಗಿದೆ ಎಂದರು. ಹಿರಿಯ ಕ್ರೀಡಾಪಟುಟಿ. ಕೆ.ಆನಂದ್ ಮಾತನಾಡಿ, ರಾಜಕಾರಣದ ಒತ್ತಡದಲ್ಲೂ ಪರಮೇಶ್ವರ್ ಅವರ ಕ್ರೀಡಾಸಕ್ತಿ ಕಡಿಮೆಯಾಗಿಲ್ಲ.

ಕ್ರೀಡಾ ಕ್ಷೇತ್ರದಲ್ಲಿ ತಮಗಿರುವ ಆಸಕ್ತಿ ಪರಿಣಾಮ ಅವರು ತುಮಕೂರಿನಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣಕ್ಕೆ ನೆರವಾಗಿದ್ದಾರೆ.

## ಕೆರೆ ಕಟ್ಟೆಗಳಿಗೆ ನೀರು ಹರಿಸದಿದ್ದರೆ ಮಂಗಳವಾರದಿಂದ ಪ್ರತಿಭಟನೆ

### ಜನ ಜಾನುವಾರುಗಳ ಕುಡಿಯುವ ನೀರಿನ ಅಗತ್ಯತೆಗಾಗಿ ಕೆರೆಗಳಿಗೆ ನೀರು ಹರಿಸಲು ಕ್ರಮವಹಿಸಿ.

• ಉದಯವಾಹಿನಿ, ಕೆ.ಆರ್.ಪೇಟೆ

ತಾಲ್ಲೂಕಿನ ಕೆರೆ ಕಟ್ಟೆಗಳಿಗೆ ತಕ್ಷಣವೇ ಹೇಮೆಯ ನೀರು ಹರಿಸದಿದ್ದರೆ ಆಗಸ್ಟ್ 11 ಮಂಗಳವಾರದಿಂದ ನೀರಿಗಾಗಿ ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಲಾಗುವುದೆಂದು ತಾಲ್ಲೂಕು ರೈತಸಂಘ ಎಚ್ಚರಿಸಿದೆ.

ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ನೇತೃತ್ವದಲ್ಲಿಂದು ಪಟ್ಟಣದ ಹೇಮಾವತಿ ಕಛೇರಿಗೆ ಆಗಮಿಸಿದ ರೈತ ಮುಖಂಡರು ನೀರಿಗಾಗಿ ಆಗ್ರಹಿಸಿ ಚಳುವಳಿ ಸಂಘಟಿಸುವ ಎಚ್ಚರಿಕೆ ನೀಡಿದರು. ಪ್ರಸ್ತುತ ಹೇಮಾವತಿ ಜಲಾಶಯದಲ್ಲಿ 29 ಟಿ.ಎಂ.ಸಿ ನೀರಿದೆ. ಇನ್ನು 08 ಟಿ.ಎಂ.ಸಿ ನೀರು ಬಂದರೆ ಜಲಾಶಯ ತುಂಬುತ್ತದೆ.. ಹೇಮಾವತಿ ನದಿಗೆ 6758 ಕ್ಯೂಸೆಕ್ಸ್ ಒಳಹರಿವಿದೆ.

ಹೇಮಾವತಿ ಜಲಾಶಯದ ಎಡದಂಡೆ ನಾಲೆಯ ಮುಖಾಂತರ ತುಮಕೂರು ಭಾಗಕ್ಕೆ 2800 ಕ್ಯೂಸೆಕ್ಸ್ ಹಾಗೂ ಮಂಡ್ಯ ಭಾಗಕ್ಕೆ 1200 ಕ್ಯೂಸೆಕ್ಸ್ ನೀರಿನ ಅಗತ್ಯವಿದೆ.

ಹೇಮಾವತಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣದಲ್ಲಿ 04 ಸಾವಿರ ಕ್ಯೂಸೆಕ್ಸ್ ನೀರು ಹರಿಸಿದರೂ 2758 ಕ್ಯೂಸೆಕ್ಸ್ ನೀರು ಹೆಚ್ಚುವರಿಯಾಗಿ ಜಲಾಶಯಕ್ಕೆ ಹರಿದು ಬರುವುದರಿಂದ ಜಲಾಶಯದ ನೀರಿನ ಮಟ್ಟದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎಂದ ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ನಮಗೆ ಬೆಳೆ ಬೆಳೆಯಲು ನೀರು ಬೇಡ.

ಆದರೆ ಜನ ಜಾನುವಾರುಗಳ ಕುಡಿಯುವ ನೀರಿನ ಅಗತ್ಯತೆಗಾಗಿ ಕೆರೆಗಳಿಗೆ ನೀರು ಹರಿಸಲು ಕ್ರಮ ವಹಿಸಿ. ಕೆರೆಗಳನ್ನು ತುಂಬಿಸಿದರೆ ಅಂತರ್ಜಲ ಮಟ್ಟವೂ ಸುಧಾರಿಸಿ ರೈತ ಸಮುದಾಯಕ್ಕೆ ಅನುಕೂಲವಾಗಲಿದೆ.


ಉದಯವಾಹಿನಿ ಚಿತ್ರ

ಕೆ.ಆರ್.ಎಸ್ ಅಣೆಕಟ್ಟೆ ಭಾಗದ ಕಾಲುವೆಗಳಿಗೆ ನೀರು ಹರಿಸಿದ ರಾಜ್ಯ ಸರ್ಕಾರ ಹೇಮಾವತಿ ಜಲಾನಯನ ಪ್ರದೇಶದ ರೈತರ ಬಗ್ಗೆ ಮೌನವಾಗಿದೆ. ಕೆರೆಕಟ್ಟೆಗಳನ್ನು ಜಲಾಶಯದ ನೀರಿನಿಂದ ತುಂಬಿಸುವುದಾಗಿ ರಾಜ್ಯದ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ನಾಡಿನ ರೈತರಿಗೆ ಭರವಸೆ ನಿಡಿದ್ದರೂ ಅದು ಇದುವರೆಗೂ ಜಾರಿಗೆ ಬಂದಿಲ್ಲ. ಹೇಮೆಯ ಬಗೆಗಿನ ಸರ್ಕಾರದ ತಾರತಮ್ಯ ಸಲ್ಲದು.

> ನೀರಾವರಿ ಇಲಾಖೆಯ ಅಧಿಕಾರಿಗಳು ಈ ಬಾಗದ ರೈತರ ಅಸಹನೆಯನ್ನು ರಾಜ್ಯ ಸರ್ಕಾರದ ಗಮನಕ್ಕೆ ತಂದು ಹೇಮಾವತಿ ನೀರಿನಿಂದ ಕೆರೆ ಕಟ್ಟೆಗಳನ್ನು ತುಂಬಿಸಲು ಕ್ರಮವಹಿಸಬೇಕು. ಇಲ್ಲದಿದ್ದರೆ ಆಗಸ್ಟ್ 11 ರಿಂದ ನೀರಿಗಾಗಿ ರೈತರ ಹೋರಾಟ ಆರಂಭವಾಗಲಿದೆ ಎಂದು ಎಚ್ಚರಿಸಿದರು.
> -ತಾಲ್ಲೂಕು ರೈತಸಂಘ

## ಬಸ್ ಘಟಕ ನಿರ್ಮಾಣಕ್ಕೆ ಸಚಿವ ಪುಟ್ಟರಂಗಶೆಟ್ಟಿ ಭೂಮಿ ಪೂಜೆ

• ಉದಯವಾಹಿನಿ, ಹನೂರು

ತಾಲ್ಲೂಕು ಕೇಂದ್ರದಲ್ಲಿ ಬಹುದಿನಗಳಿಂದ ಬೇಡಿಕೆಯಲ್ಲಿದ್ದ ನೂತನ ಕೆ.ಎಸ್.ಆರ್.ಟಿ.ಸಿ ಬಸ್ ಘಟಕ 7,52 ಕೋಟಿ ರೂ. ವೆಚ್ಚದ ನಿರ್ಮಾಣ ಕಾರ್ಯಕ್ಕೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟಿ ಅವರು ಗುದ್ದಲಿ ಪೂಜೆ ನೆರವೇರಿಸಿದರು.

ಹನೂರು ತಾಲ್ಲೂಕಿನ ಮಂಗಲ ಗ್ರಾಮದ ಸರ್ವೇ ನಂ 430/010 ಮತ್ತು ಲೋಕನಹಳ್ಳಿ ಹೋಬಳಿಯ ಕಣ್ಣೂರು ಗ್ರಾಮದ ಸರ್ವೇ ನಂ 1/1 ವ್ಯಾಪ್ತಿಯ ಒಟ್ಟು 4 ಎಕರೆ 0.50 ಸೆಂಟ್ಸ್ ಜಾಗದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಚಾಮರಾಜನಗರ ವಿಭಾಗದ ವತಿಯಿಂದ ಆಧುನಿಕ ಘಟಕ ನಿರ್ಮಾಣ ಮಾಡಲಾಗುತ್ತಿದೆ.

ಇದೆ ವೇಳೆ ಸಚಿವರಾದ ಪುಟ್ಟರಂಗಶೆಟ್ಟಿ ಅವರು ಮಾತನಾಡಿ ಹನೂರು ಭಾಗದಲ್ಲಿ ಸುಸಜ್ಜಿತ ಬಸ್ ಘಟಕ ನಿರ್ಮಾಣವಾಗುವುದರಿಂದ ಗ್ರಾಮೀಣ ಹಾಗೂ ಕಾಡಂಚಿನ ಪ್ರದೇಶಗಳಿಗೆ ಹೆಚ್ಚುವರಿ ಬಸ್ ಸಂಚಾರ ಕಲ್ಪಿಸಲು ಸಾರಿಗೆ ನಿಗಮಕ್ಕೆ ನೆರವಾಗಲಿದೆ. ಇದರಿಂದ ಸ್ಥಳೀಯ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ಸುಲಭ ಪ್ರಯಾಣಕ್ಕೆ ಅನುಕೂಲವಾಗಲಿದೆ ಎಂದು ತಿಳಿಸಿದರು.ಒಟ್ಟು 1682.00 ಚದರ ಮೀಟರ್ ಪ್ರದೇಶದಲ್ಲಿ ನೆಲ ಮತ್ತು ಮೊದಲ ಅಂತಸ್ತಿನ ಮುಖ್ಯ ಕಟ್ಟಡ ನಿರ್ಮಾಣವಾಗಲಿದೆ. ಮಹಿಳಾ ಮತ್ತು ಪುರುಷ ಸಿಬ್ಬಂದಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ, ತಾಂತ್ರಿಕ ಸಿಬ್ಬಂದಿಗೆ ಪ್ರತ್ಯೇಕ ಕೊಠಡಿ ಇರಲಿದೆ.ಪ್ರಯಾಣಿಕರು ಹಾಗೂ ಸಿಬ್ಬಂದಿಗೆ ಪ್ರತ್ಯೇಕ ಶೌಚಾಲಯ ಸಂಕೀರ್ಣ, ಬಸ್‌ಗಳ ನಿರ್ವಹಣೆಗೆ ವಾಹನ ದುರಸ್ತಿ ಅಂಕಣ, ವಾಷಿಂಗ್ ರ್ಯಾಂಪ್ ಮತ್ತು ಇಂಧನ ತುಂಬಿಸುವ ಟ್ಯಾಂಕ್ ವ್ಯವಸ್ಥೆ ಇರಲಿದೆ.

**ಸಿಬ್ಬಂದಿ ಕೊಠಡಿ ನಿರ್ಮಿಸುವ ಯೋಜನೆ**

ಇದಲ್ಲದೆ ಕುಡಿಯುವ ನೀರಿಗಾಗಿ ನೀರು ಶುದ್ಧೀಕರಣ ಘಟಕ, ಮಳೆ ನೀರು ಕೊಯ್ಲು, ಇಂಗು ಗುಂಡಿ ವ್ಯವಸ್ಥೆ ಹಾಗೂ ಸುರಕ್ಷತೆಗಾಗಿ ಸುತ್ತುಗೋಡೆ ಮತ್ತು ಭದ್ರತಾ ಸಿಬ್ಬಂದಿ ಕೊಠಡಿ ನಿರ್ಮಿಸುವ ಯೋಜನೆ ರೂಪಿಸಲಾಗಿದೆ.


ಉದಯವಾಹಿನಿ ಚಿತ್ರ

## ಬೈರಂಡಹಳ್ಳಿಯಲ್ಲಿ ಹೈಮಾಸ್ಕ್ ಲೈಟ್ ಅಳವಡಿಕೆಗೆ ಗುದ್ದಲಿಪೂಜೆ

• ಉದಯವಾಹಿನಿ, ಕೋಲಾರ

ತಾಲ್ಲೂಕಿನ ವೇಮಗಲ್ ಹೋಬಳಿಯ ಬೈರಂಡಹಳ್ಳಿ ಗ್ರಾಮದಲ್ಲಿ ಸಮಾಜ ಸೇವಕ ಹಾಗೂ ಎಲ್.ಜಿ. ಫೌಂಡೇಶನ್ ಅಧ್ಯಕ್ಷ ಎಲ್.ಜಿ. ಲಕ್ಷ್ಮಣಗೌಡ ಅವರ ಸ್ವಂತ ವೆಚ್ಚದಲ್ಲಿ ಹೈಮಾಸ್ಕ್ ಲೈಟ್ ಅಳವಡಿಸುವ ಕಾಮಗಾರಿಗ ಗುದ್ದಲಿಪೂಜೆ ನೆರವೇರಿಸಲಾಯಿತು.

ಇತ್ತೀಚೆಗೆ ಗ್ರಾಮದ ಸ್ಮಶಾನದಲ್ಲಿ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವೇಳ ಗ್ರಾಮಸ್ಥರು ಹೈಮಾಸ್ಕ್ ಲೈಟ್ ಅಳವಡಿಸುವಂತೆ ಎಲ್.ಜಿ. ಲಕ್ಷ್ಮಣಗೌಡ ಅವರಲ್ಲಿ ಮನವಿ ಮಾಡಿದರು. ಗ್ರಾಮಸ್ಥರ ಮನವಿಗ ತಕ್ಷಣ ಸ್ಪಂದಿಸಿದ ಅವರು, ತಮ್ಮ ಸ್ವಂತ ಹಣದಲ್ಲಿ ಹೈಮಾಸ್ಕ್ ಲೈಟ್ ಅಳವಡಿಸುವುದಾಗಿ ಭರವಸೆ ನೀಡಿದ್ದರು. ಅದರಂತೆ ಕಾಮಗಾರಿಗ ಚಾಲನೆ ನೀಡಲಾಗಿದ್ದು, ಇನ್ನು 20 ದಿನಗಳೊಳಗಾಗಿ ಹೈಮಾಸ್ಕ್ ಲೈಟ್ ಅಳವಡಿಸಿ ಗ್ರಾಮದಲ್ಲಿ ಬಳಕಿನ ಸೌಲಭ್ಯ ಕಲ್ಪಿಸಲಾಗುವುದು ಎಂದರು. ಗ್ರಾಮದ ಜನರ ಮೂಲಭೂತ ಅಗತ್ಯಗಳಿಗ ಸ್ಪಂದಿಸಿ ಸ್ವಂತ ವೆಚ್ಚದಲ್ಲಿ ವ್ಯವಸ್ಥೆ ಕಲ್ಪಿಸಲು ಮುಂದಾಗಿರುವ ಎಲ್.ಜಿ. ಲಕ್ಷ್ಮಣಗೌಡ ಅವರ ಕಾರ್ಯಕ್ಕ ಗ್ರಾಮಸ್ಥರು ಮೆಚ್ಚುಗ ವ್ಯಕ್ತಪಡಿಸಿದರು.

ಗ್ರಾಮಗಳ ಅಭಿವೃದ್ಧಿಗ ಸರ್ಕಾರದ ಜೊತೆಗ ಸಮಾಜ ಸೇವಕರು ಹಾಗೂ ದಾನಿಗಳು ಕೈಜೋಡಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಗ್ರಾಮದ ಮುಖಂಡರಾದ ಜಯರಾಮ್, ವೆಂಕಟೇಶ್, ನವೀನ್, ನಾಗೇಶ್, ನವೀನ್ ಗೌಡ, ಅಂಬರೀಷ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಗ್ರಾಮಸ್ಥರ ಮನವಿಗ ಸ್ಪಂದಿಸಿ ಶೀಘ್ರವಾಗಿ ಕಾಮಗಾರಿ ಆರಂಭಿಸಿರುವ ಎಲ್.ಜಿ. ಲಕ್ಷ್ಮಣಗೌಡ ಅವರಿಗ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದರು.

# ಪಿಎಲ್‌ಡಿ ಬ್ಯಾಂಕ್ ಚುನಾವಣೆ ಗೆಲುವು : ಬಿಜೆಪಿ ಮತದಾರ ಕೃತಜ್ಞತೆ ಸಭೆ

• ಉದಯವಾಹಿನಿ, ಗುಂಡ್ಲುಪೇಟೆ:

ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಪಿಎಲ್‌ಡಿ) ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ್ದು, 14 ಸ್ಥಾನಗಳ ಪೈಕಿ 12 ಸ್ಥಾನಗಳನ್ನ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆದ್ದಿದ್ದಾರೆ. ಈ ಗೆಲುವು ಮುಂಬರುವ ವಿಧಾನಸಭಾ ಚುನಾವಣೆಗೆ ಮುನ್ನುಡಿಯಾಗಲಿದೆ ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಚಾಮರಾಜನಗರ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್ ಹೇಳಿದರು.


ಉದಯವಾಹಿನಿ ಚಿತ್ರ

ಪಟ್ಟಣದ ಸಿ.ಎಂ.ಎಸ್. ಕಲಾಮಂದಿರದಲ್ಲಿ ಬಿಜೆಪಿ ವತಿಯಿಂದ ಆಯೋಜಿಸಿದ್ದ ಕೃತಜ್ಞತಾ ಸಭೆಯನ್ನ ಉದ್ಘಾಟಿಸಿ ಮಾತನಾಡಿದ ಅವರು ಪಿಎಲ್ಡಿ ಬ್ಯಾಂಕ್ ಚುನಾವಣೆಯ ಫಲಿತಾಂಶ ಆಡಳಿತ ಪಕ್ಷದ ವಿರುದ್ಧ ಜನ ನೀಡಿರುವ ತೀರ್ಪು. ಜನರು ಯಾರನ್ನೂ ಏನು ಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬ ವರ್ತನೆಗೆ ತಕ್ಕ ಉತ್ತರ ನೀಡಿದ್ದಾರೆ ಎಂದು ಹೇಳಿದರು. ಬಿಜೆಪಿಯು ಕಳೆದ ಐದು ವರ್ಷಗಳಿಂದ ಶಕ್ತಿ ಮೀರಿ ಕೆಲಸ ಮಾಡಿದೆ. ಕ್ಷೇತ್ರದಲ್ಲಿ ಕೆಲಸ ಮಾಡಿಲ್ಲ ಎಂದು ಯಾರೂ ನನ್ನನ್ನು ದೂಷಣೆ ಮಾಡದಿರುವುದು ಸಮಾಧಾನಕರ. ಕಳೆದ ಮೂರು ಚುನಾವಣೆಗಳಲ್ಲಿ ಸೋತ ಬಳಿಕವೂ ಪಕ್ಷದ ಚಟುವಟಿಕೆಗಳನ್ನ ನಿರಂತರವಾಗಿ ನಡೆಸಿಕೊಂಡು ಬಂದಿದ್ದೇವೆ. ಆಡಳಿತ ಪಕ್ಷವನ್ನ ಎಚ್ಚರಿಸುವ ಕೆಲಸವನ್ನ ವಿರೋಧ ಪಕ್ಷವಾಗಿ ಮಾಡುತ್ತಿದ್ದೇವೆ ಎಂದರು.

### ಅಭಿವೃದ್ಧಿ ಕಾರ್ಯಗಳ ಬಗ್ಗೆ ದಾಖಲೆ ನೀಡಲಿ

ಕಾಂಗ್ರೇಸ್ ಸರ್ಕಾರದ ಅವಧಿಯಲ್ಲಿ ಅಭಿವೃದ್ಧಿಗೆ ಅನುದಾನದ ಕೊರತೆ ಎದುರಾಗಿದೆ ಎಂದು ಆರೋಪಿಸಿದ ನಿರಂಜನ್ ನಮ್ಮ ಅವಧಿಯಲ್ಲಿ ಹತ್ತಿ ಮಾರುಕಟ್ಟೆ, ಬೊಮ್ಮನಹಳ್ಳಿಯಲ್ಲಿ ಅಂಬೇಡ್ಕರ್ ವಸತಿ ಶಾಲೆ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನ ಕೈಗೆತ್ತಿಕೊಳ್ಳಲಾಗಿತ್ತು ಇದರ ಜೊತೆಯಲ್ಲೇ ನಾಲ್ಕು ಕಡೆ ವಿದ್ಯುತ್ ಸ್ಥಾವರಗಳಿಗಾಗಿ ಅನುದಾನ ಹಾಗೂ ಜಾಗ ಒದಗಿಸಲಾಗಿದೆ. ಗುಂಡ್ಲುಪೇಟೆ ಪಟ್ಟಣಕ್ಕೆ 120 ಕೋಟಿ ವೆಚ್ಚದ ಕುಡಿಯುವ ನೀರಿನ ಯೋಜನೆ ತರಲಾಗಿದೆ. ಇದೀಗ ಇವುಗಳನ್ನೆಲ್ಲ ತಮ್ಮದೇ ಸಾಧನೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಬಾಲಿಶತನದ ಹೇಳಿಕೆ ಕೊಡುತ್ತಿದ್ದಾರೆ ಎಂದು ಟೀಕಿಸಿದ ಅವರು ಇದಕ್ಕೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ನೀಡಲಿ ಎಂದು ಸವಾಲು ಹಾಕಿದರು. ರಸ್ತೆ ಕಾಮಗಾರಿಗಳಲ್ಲಿಯೂ ತಾರತಮ್ಯ ನಡೆಯುತ್ತಿದೆ ಎಂದು ಆರೋಪಿಸಿದ ಅವರು, ಉತ್ತಮ ಸ್ಥಿತಿಯಲ್ಲಿರುವ ರಸ್ತೆಗಳನ್ನ ಅಭಿವೃದ್ಧಿ ಹೆಸರಿನಲ್ಲಿ ಪದೇಪದೇ ಅದ್ವಾನಗೊಳಿಸಲಾಗುತ್ತಿದೆ. ಆದರೆ ಅಗತ್ಯವಿರುವ ಹಲವು ಗ್ರಾಮಗಳ ರಸ್ತೆಗಳತ್ತ ಶಾಸಕರು ಆಸಕ್ತಿ ತೋರುತ್ತಿಲ್ಲ. ನಮ್ಮ ಆಡಳಿತವಾದಿ ಹಾಗೂ ಪ್ರಸ್ತುತ ನಿಮ್ಮ ಕಾರ್ಯವೈಖರಿಯನ್ನ ಜನರೇ ತುಲನೆ ಮಾಡಲಿ ಎಂದರು.

### ಕೆರೆಗಳಿಗೆ ನೀರು ತುಂಬಿಸುವಲ್ಲಿ ಸರ್ಕಾರ ವಿಫಲ

ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ವಿಚಾರದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಈ ಕುರಿತಾಗಿ ರೈತರು ಹಲವು ಬಾರಿ ಪ್ರತಿಭಟನೆ ನಡೆಸಿದ್ದಾರೆ. ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಕೂಡ ನೀರಿಗಾಗಿ ಹೋರಾಟ ನಡೆಸಿದ್ದಾರೆ. ಡಿಸೆಂಬರ್‌ನಲ್ಲಿ ಕೆರೆಗಳಿಗೆ ನೀರು ತುಂಬಿಸುವುದಾಗಿ ಹೇಳಿ, ಬಳಿಕ ತಾಂತ್ರಿಕ ದೋಷ, ಮೋಟಾರ್ ದುರಸ್ತಿ ಎಂಬ ಕಾರಣಗಳನ್ನ ನೀಡಲಾಗುತ್ತಿದೆ. ಮೂರು ಮೋಟಾರ್‌ಗಳ ದುರಸ್ತಿಗೆ 30 ಲಕ್ಷ ಬೇಕಾಗಿದ್ದರೂ 2 ಕೋಟಿ ಎಂದು ಹೇಳಲಾಗಿದೆ ಎಂದು ದೂರಿದರು.ಗಾಂಧಿಗ್ರಾಮ ಹಾಗೂ ಮೂರನೇ ಹಂತಕ್ಕೆ ನೀರು ಬಿಡದಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮೂರು ವರ್ಷಕ್ಕೂ ಹೆಚ್ಚು ಕಾಲ ಅಧಿಕಾರದಲ್ಲಿದ್ದರೂ ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗಿಲ್ಲ. ಸಾಮಾನ್ಯ ಜನರ ಕಷ್ಟ ಅರ್ಥ ಮಾಡಿಕೊಳ್ಳದವರು ಆಡಳಿತ ನಡೆಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು. ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ಕಾಂಗ್ರೇಸ್ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ ಸೇರಿದಂತೆ ಹಲವು ಸಮಸ್ಯೆಗಳು ಎದುರಾಗಿವೆ , ರೈತರಿಗೆ ಸಬ್ಸಿಡಿ ಇಲ್ಲ, ಯುವಕರಿಗೆ ನಿರುದ್ಯೋಗ ಭತ್ಯೆ ಇಲ್ಲ, ವೃದ್ಧಾಪ್ಯ ಹಾಗೂ ಅಂಗವಿಕಲರ ವೇತನ ನೀಡಲು ಹಣದ ಕೊರತೆ ಎದುರಾಗಿದೆ ಎಂದು ಕುಹಕವಾಡಿದರು. ಕೇರಳಕ್ಕೆ ಖನಿಜ ಸಂಪತ್ತು ಸಾಗಣೆಯಾಗುತ್ತಿರುವ ಸರ್ಕಾರ ಸ್ಪಷ್ಟನೆ ನೀಡಬೇಕು, ಅನ್ನಭಾಗ್ಯ ಅಕ್ಕಿ, ಗೋವು ಸಾಗಣೆ, ಗಾಂಜಾ ಹಾಗೂ ಹಳ್ಳಿಗಳಿಗೆ ಲಾಟರಿ ಮಾರಾಟದಂತಹ ವಿಚಾರಗಳ ಬಗ್ಗೆಯೂ ವಿರೋಧ ಪಕ್ಷ ಧ್ವನಿ ಎತ್ತುತ್ತಿದೆ. ಬೆಂಗಳೂರು ಮತ್ತು ಮೈಸೂರು ಗುತ್ತಿಗೆದಾರರಿಗೆ ನೀಡಲಾಗುತ್ತಿದೆ ಎಂದು ಆರೋಪಿಸಿದರು. ಮಂಡಲ ಅಧ್ಯಕ್ಷ ಪ್ರಸಾದ್, ಎಲ್.ಸುರೇಶ್, ಎಸ್ಸಿ ಮೋರ್ಚಾ ಚಾ.ನಗರ ಜಿಲ್ಲಾಧ್ಯಕ್ಷ ಡಾ.ನವೀನ್ ಮೌರ್ಯ, ಜಾರಕಿಹೊಳಿ ಬ್ರಿಗೇಡ್ ಗೋವಿನಾಯಕ್, ನಿಟ್ರೆ ಶಿವಣ್ಣನಾಯ್ಕ, ಪ್ರಕಾಶ್ ಮೂಡ್ನಾಕೂಡು, ನಾಗೇಶ್, ಮಲ್ಲಿಕಾರ್ಜುನಪ್ಪ, ಜಗದೀಶ್, ನಿಟ್ರೆ ನಾಗರಾಜಪ್ಪ, ಬಸವರಾಜು ಅಗತಗೌಡನಹಳ್ಳಿ, ಮಂಜು ಶಿವಪುರ, ಪ್ರಣಯ್ ಹಂಗಳ, ಶಿವಬಸಪ್ಪ, ವಿಜಯ್ ಬೊಮ್ಮನಹಳ್ಳಿ, ಸುನಿಲ್ ಮೂಡ್ಲು, ಸದ್ದಾಂ, ಮಂಜುನಾಥ್ ಬಾಚಹಳ್ಳಿ, ಹಾಗೂ ಪಿಎಲ್ಡಿ ಬ್ಯಾಂಕ್ ಚುನಾವಣೆಯಲ್ಲಿ ವಿಜಯಸಾಧಿಸಿದ ಅಭ್ಯರ್ಥಿಗಳು, ಕಾರ್ಯಕರ್ತರು ಹಾಜರಿದ್ದರು.

ಅಂತರಾಳದಿಂದ... EDITORIAL

# ಸಾಲಗಾರರಿಗೆ ವಿಪರೀತ ಕಿರುಕುಳ ಬ್ಯಾಂಕ್‌ಗಳಿಗೆ ಆರ್‌ಬಿಐ ಕಡಿವಾಣ




ಸಾಲ ಮರುಪಾವತಿಗೆ ಸಂಬಂಧಿಸಿದಂತೆ ಬ್ಯಾಂಕ್‌ಗಳು ಮತ್ತು ಬ್ಯಾಂಕ್ ಗಳಿಂದ ನೇಮಕಗೊಂಡ ಏಜೆಂಟರು ಸಾಲಗಾರರಿಗೆ ಕಿರುಕುಳ, ಮಾನಸಿಕ ಒತ್ತಡ ಹೇರುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಸಂಬಂಧ ಸಾರ್ವಜನಿಕ ವಲಯದಿಂದ ತೀವ್ರ ಆಕ್ರೋಶ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್, ಸಾಲ ವಸೂಲಾತಿಗೆ ಹೊಸ ನಿಯಮಾವಳಿಯನ್ನು ಜಾರಿಗೆ ತರಲು ಮುಂದಾಗಿದೆ. ಬ್ಯಾಂಕ್‌ಗಳ ಈ ಎಲ್ಲಾ ದುರ್ವರ್ತನೆ ಮತ್ತು ಬಲವಂತದ ಕ್ರಮಗಳಿಗೆ ಕಡಿವಾಣ ಹಾಕಲು ಮುಂದಾಗಿರುವ ಆರ್‌ಬಿಐ ಸ್ಪಷ್ಟ ಮಾರ್ಗಸೂಚಿಯನ್ನು ರೂಪಿಸಿದ್ದು, ಇದು 2027ರ ಜನವರಿ ಒಂದರಿಂದ ಅನ್ವಯವಾಗಲಿದೆ. ಈ ಹೊಸ ಮಾರ್ಗಸೂಚಿಯನ್ನು ಬ್ಯಾಂಕ್‌ಗಳು ಯಥಾವತ್ತಾಗಿ ಪಾಲಿಸಿದ್ದೇ ಆದಲ್ಲಿ ಸಾಲಗಾರರು ನಿರಾಳರಾಗಲಿದ್ದಾರೆ. ಸಾಲ ಮರುಪಾವತಿ ವಿಷಯದಲ್ಲಿ ಬ್ಯಾಂಕ್‌ಗಳು ತೋರುವ ದಬ್ಬಾಳಿಕೆಯ ನೀತಿಯ ಕುರಿತಂತೆ ಈ ಹಿಂದಿನಿಂದಲೂ ಸಾರ್ವಜನಿಕ ವಲಯದಿಂದ ತೀವ್ರ ಅಸಮಾಧಾನ ವ್ಯಕ್ತವಾಗುತ್ತಲೇ ಬಂದಿತ್ತು. ಸಾಲ ಮರುಪಾವತಿಯಲ್ಲಿ ಒಂದಿಷ್ಟು ವಿಳಂಬವಾದರೂ ಬೆದರಿಕೆ ತಂತ್ರಗಳನ್ನು ಅನುಸರಿಸಲು ಮುಂದಾಗುವ ಬ್ಯಾಂಕ್‌ಗಳು ಇದಕ್ಕಾಗಿ ಪ್ರತ್ಯೇಕ ಸಂಸ್ಥೆ ಇಲ್ಲವೇ ಏಜೆಂಟರನ್ನು ನೇಮಿಸಿಕೊಳ್ಳುತ್ತವೆ. ನಾನಾ ಕಾರಣಗಳಿಂದಾಗಿ ಸಾಲ ಮರುಪಾವತಿ ಮಾಡಲು ವಿಫಲವಾಗುವ ಸಾಲಗಾರರಿಗೆ ಈ ಏಜೆಂಟರ ಮೂಲಕ ಬ್ಯಾಂಕ್‌ಗಳು ಇನ್ನಿಲ್ಲದ ಕಿರುಕುಳ, ದೌರ್ಜನ್ಯ ಎಸಗುತ್ತಿವೆ. ಕೆಲವು ಸಂದರ್ಭಗಳಲ್ಲಿ ಏಜೆಂಟರು ವಸೂಲಾತಿಗಾಗಿ ವಿವಿಧ ತೆರನಾದ ಅಡ್ಡ ಹಾದಿಗಳನ್ನು ತುಳಿಯುವುದು ಇತ್ತೀಚೆಗೆ ಸಾಮಾನ್ಯವಾಗತೊಡಗಿದೆ.

**ಸಹಜವಾಗಿಯೇ ಇದು ಬ್ಯಾಂಕ್‌ಗಳ ಒಟ್ಟಾರೆ ವ್ಯವಹಾರದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಇಂದಿನ ಡಿಜಿಟಲ್ ಯುಗದಲ್ಲಂತೂ ಸಾಲಗಾರರಿಗೆ ಸಾಮಾಜಿಕ ಜಾಲತಾಣಗಳು, ಮೊಬೈಲ್ ಕರೆ, ಸಂದೇಶಗಳ ಮೂಲಕ ಬೆದರಿಕೆ ಒಡ್ಡುವ, ಒತ್ತಡ ಹೇರುವ, ಅವಮಾನ ಮಾಡುವ ಮೂಲಕ ಅವರಿಗೆ ಇನ್ನಿಲ್ಲದ ಕಿರುಕುಳ ನೀಡಲಾಗುತ್ತಿದೆ. ಇನ್ನು ಸಾಲಗಾರರಿಗೆ ರಾತ್ರಿ ಅಥವಾ ಬೆಳ್ಳಂಬೆಳಗ್ಗೆ ಕರೆ ಮಾಡಿ ಧಮ್ಕಿ ಹಾಕುವ ಕಾರ್ಯವೂ ನಡೆಯುತ್ತಿದೆ.**

**ಸಾಲ ಮರುಪಾವತಿ ಮಾಡದಿರುವುದನ್ನು ಮುಂದಿಟ್ಟು ಸಾಮಾಜಿಕ ಜಾಲ ತಾಣಗಳಲ್ಲಿ ವೈಯಕ್ತಿಕ ನಿಂದನೆ ಮಾಡುವ ಮೂಲಕ ಸಾಮಾಜಿಕವಾಗಿ ಅವರನ್ನು ಅವಮಾನಿಸುವ ಕಾರ್ಯವೂ ನಡೆಯುತ್ತಿದೆ.**

ಅಷ್ಟು ಮಾತ್ರವಲ್ಲದೆ ಅಧಿಕೃತ ದಾಖಲೆಪತ್ರಗಳಿಲ್ಲದೆಯೇ ಸಾಲಗಾರರ ಮನೆ ಇಲ್ಲವೇ ಕಚೇರಿಗೆ ದಿಢೀರನೆ ತೆರಳಿ ಅವರ ಮೇಲೆ ಸಾಲ ಮರುಪಾವತಿಗೆ ಒತ್ತಡ ಹೇರುವಂತಹ ಘಟನೆಗಳು ನಡೆಯುತ್ತಿವೆ. ಬ್ಯಾಂಕ್ ಇಲ್ಲವೇ ಏಜೆಂಟರ ಕಿರುಕುಳ, ದೌರ್ಜನ್ಯದಿಂದ ಬೇಸತ್ತು ಸಾಲಗಾರರು ಆತ್ಮಹತ್ಯೆಗೆ ಶರಣಾದ ಪ್ರಕರಣಗಳೂ ಇವೆ. ಈ ಬಗ್ಗೆ ಕಳೆದ ಹಲವಾರು ವರ್ಷಗಳಿಂದ ಆರ್‌ಬಿಐ ಮತ್ತು ಸರ್ಕಾರದ ಗಮನ ಸೆಳೆಯುತ್ತ ಬರಲಾಗಿತ್ತು. ಕೊನೆಗೂ ಸಾರ್ವಜನಿಕರ ಬೇಡಿಕೆಗೆ ಸ್ಪಂದಿಸಿರುವ ಆರ್‌ಬಿಐ, ಸಾಲ ಮರುಪಾವತಿಗೆ ಸಂಬಂಧಿಸಿದಂತೆ ಬ್ಯಾಂಕ್‌ಗಳು ಇಲ್ಲವೇ ಏಜೆಂಟರು ಅನುಸರಿಸುತ್ತಿರುವ ಎಲ್ಲಾ ತೆರನಾದ ಒತ್ತಡ ತಂತ್ರಗಳು ಮತ್ತು ಕಿರುಕುಳಕ್ಕೆ ಕಡಿವಾಣ ಹಾಕಲು ಅತ್ಯಂತ ಕಠಿನ ನಿಯಾಮವಳಿಯನ್ನು ರೂಪಿಸಿದೆ. ಪ್ರತಿಯೊಂದು ಅಂಶವನ್ನು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಮಾರ್ಗಸೂಚಿಯನ್ನು ರೂಪಿಸಿದೆ. ಇದನ್ನು ಪಾಲಿಸದಿದ್ದಲ್ಲಿ ಬ್ಯಾಂಕ್‌ಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿಯೂ ಎಚ್ಚರಿಕೆ ನೀಡಿದೆ. ಆರ್‌ಬಿಐ ಈ ಹೊಸ ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದ್ದೇ ಆದಲ್ಲಿ ಸಾಲಗಾರರು ಕಿರುಕುಳದಿಂದ ಮುಕ್ತರಾಗಲಿದ್ದಾರೆ. ಅಲ್ಲದೆ ಇಂತಹ ಪಾರದರ್ಶಕ ಕ್ರಮಗಳಿಂದ ಸಾಲ ವಸೂಲಾತಿ ಪ್ರಕ್ರಿಯೆ ನಡೆದದ್ದೇ ಆದಲ್ಲಿ ಬ್ಯಾಂಕ್‌ಗಳ ಮೇಲಿನ ಗ್ರಾಹಕರ ವಿಶ್ವಾಸಾರ್ಹತೆ ಮತ್ತಷ್ಟು ಹೆಚ್ಚಲಿದೆಯಲ್ಲದೆ ವ್ಯವಹಾರವೂ ವೃದ್ಧಿಯಾಗಲಿದೆ.

## ಸ್ಪೂನ್ ಬಿಟ್ಟು ಕೈಯಲ್ಲಿ ಊಟ ಮಾಡುವುದರಿಂದ ಎಷ್ಟೆಲ್ಲಾ ಪ್ರಯೋಜನಗಳು ಲಭಿಸುತ್ತವೆ ನೋಡಿ

ನಮ್ಮಲ್ಲಿ ಅನಾದಿ ಕಾಲದಿಂದಲೂ ಕೈಯಲ್ಲಿಯೇ ಆಹಾರ ಸೇವಿಸುವ ಪದ್ಧತಿಯಿದೆ. ಆದರೆ ವಿದೇಶಿ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ನಮ್ಮಲ್ಲಿ ಇಂದು ಅನೇಕರು ಕೈ ಬದಲು ಸ್ಪೂನ್, ಫೋರ್ಕ್ ಬಳಕೆ ಮಾಡುತ್ತಾರೆ. ಇನ್ನೂ ತಮಾಷೆಯ ವಿಷಯ ಏನಪ್ಪಾ ಅಂದ್ರೆ, ಕೆಲವರು ಯಾರು ಏನೆನ್ನುತ್ತಾರೆ ಅನ್ನೋ ಕಾರಣಕ್ಕೆ ಕೈಯಲ್ಲಿ ಊಟ ಸವಿಯಲು ನಾಚಿಕೆ ಪಟ್ಟು, ಸ್ಟೈಲ್ ಆಗಿ ಸ್ಪೂನ್ ಬಳಸಿ ಊಟ ಸೇವಿಸುತ್ತಾರೆ. ಆದ್ರೆ ಏನು ಗೊತ್ತಾ ಸ್ಪೂನ್‌ಗಿಂತ ಕೈಯಲ್ಲಿ ಆಹಾರ ಸೇವಿಸೋದು ಬೆಸ್ಟ್ ಅಂತೆ. ಏಕೆಂದರೆ ಇದು ಆಹಾರವನ್ನು ಆನಂದಿಸಲು ಅನುವು ಮಾಡಿಕೊಡುವುದಲ್ಲದೆ, ಆರೋಗ್ಯಕ್ಕೂ ಸಖತ್ ಪ್ರಯೋಜನಕಾರಿ. ಹಾಗಿದ್ದರೆ ಕೈಗಳಿಂದ ಆಹಾರವನ್ನು ಸೇವಿಸುವ ಅಭ್ಯಾಸದಿಂದ ದೊರಕುವ ಆರೋಗ್ಯ ಪ್ರಯೋಜನಗಳ ಬಗ್ಗೆ ತಿಳಿಯೋಣ. ಆಯುರ್ವೇದದ ಪ್ರಕಾರ, ನಿಮ್ಮ ಬೆರಳುಗಳಿಂದ ಆಹಾರವನ್ನು ಸ್ಪರ್ಶಿಸುವುದರಿಂದ ದೇಹದ ಐದು ಅಂಶಗಳು (ಅಗ್ನಿ, ನೀರು, ಗಾಳಿ, ಭೂಮಿ ಮತ್ತು ಆಕಾಶ) ಸಮತೋಲನಗೊಳ್ಳುತ್ತವೆ, ಇದು ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ. ಅಲ್ಲದೆ ಕೈಗಳಿಂದ ಊಟ ಮಾಡುವ ಈ ಅಭ್ಯಾಸವು ನಿಧಾನವಾಗಿ ತಿನ್ನುವುದನ್ನು ಮತ್ತು ಉತ್ತಮವಾಗಿ ಅಗಿಯುವುದನ್ನು ಉತ್ತೇಜಿಸುತ್ತದೆ, ಇದು ಜೀರ್ಣಕ್ರಿಯೆಯನ್ನು ಸುಗಮಗೊಳಿಸುತ್ತದೆ, ಜೀರ್ಣಾಂಗ ವ್ಯವಸ್ಥೆಯನ್ನು ಬಲಪಡಿಸುತ್ತದೆ ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮತ್ತು ಗ್ಯಾಸ್ಟ್ರಿಕ್ ಸಮಸ್ಯೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ತೂಕ ನಿಯಂತ್ರಣ:** ಬೆರಳುಗಳಿಂದ ಆಹಾರವನ್ನು ಸ್ಪರ್ಶಿಸುವುದರಿಂದ ಮೆದುಳಿಗೆ ಜೀರ್ಣಕಾರಿ ಕಿಣ್ವಗಳನ್ನು ಸಕ್ರಿಯಗೊಳಿಸುವ ಸಂಕೇತಗಳು ರವಾನೆಯಾಗುತ್ತವೆ. ನಿಮ್ಮ ಕೈಗಳಿಂದ ತಿನ್ನುವುದರಿಂದ ಆಹಾರದ ಪ್ರಮಾಣ ಮತ್ತು ತಾಪಮಾನವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದು ಅತಿಯಾಗಿ ತಿನ್ನುವುದನ್ನು ತಪ್ಪಿಸಲು, ತೂಕ ನಿಯಂತ್ರಿಸಲು ಸಹಾಯ ಮಾಡುತ್ತದೆ. ಆಯುರ್ವೇದದಲ್ಲಿ, ಕೈಗಳಿಂದ ತಿನ್ನುವುದು ಮಾನಸಿಕ ಮತ್ತು ದೈಹಿಕ ಸಮತೋಲನಕ್ಕೆ ಮುಖ್ಯವೆಂದು ಪರಿಗಣಿಸಲಾಗಿದೆ. ಇದು ಚಯಾಪಚಯ ಕ್ರಿಯೆಯನ್ನು ಸಕ್ರಿಯಗೊಳಿಸುತ್ತದೆ ಏಕೆಂದರೆ ಬೆರಳುಗಳ ಸ್ಪರ್ಶವು ಮೆದುಳಿಗೆ ಸಂಕೇತ ನೀಡುತ್ತದೆ, ಜೀರ್ಣಕ್ರಿಯೆಯ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ. ಇದು ಆಹಾರದ ಸರಿಯಾದ ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಕೈಯಲ್ಲಿ ಊಟ ಮಾಡುವುದರಿಂದ ಆಹಾರದ ರುಚಿ ಹೆಚ್ಚುವುದಲ್ಲದೆ, ಕೈಗಳಿಂದ ತಿನ್ನುವುದರಿಂದ ಮೆದುಳಿಗೆ ಆಹಾರದ ವಿನ್ಯಾಸ, ತಾಪಮಾನ ಮತ್ತು ನೋಟವನ್ನು ಚೆನ್ನಾಗಿ ಗುರುತಿಸಲು ಅನುವು ಮಾಡಿಕೊಡುತ್ತದೆ.

## ಹೇಗೆ ಕಲಿಯಬೇಕು? ಅದೇ ಭವಿಷ್ಯ



ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

47

**ಶಿಕ್ಷಣ ತಜ್ಞರು ಮತ್ತು ಮನೋವಿಜ್ಞಾನಿಗಳು ಹೇಳುವ ಸಕ್ರಿಯ ಕಲಿಕೆಯೇ ಇದರ ಮರ್ಮ. ಮೊದಲ ಸೂತ್ರ: ಕಲಿಕೆಯನ್ನು ಚೂರುಚೂರು ಮಾಡುವುದು. ದೊಡ್ಡ ಪಾಠವನ್ನು ಸಣ್ಣ ಭಾಗಗಳಾಗಿ ಒಡೆದು ಮೊದಲು ಓದಿ, ಅನಂತರ ವಿಡಿಯೋ ನೋಡಿ, ಕೊನೆಯಲ್ಲಿ ಸ್ವಂತವಾಗಿ ಟಿಪ್ಪಣಿ ಬರೆಯಿರಿ. ಓದು, ನೋಡು, ಬರೆ - ಈ ತ್ರಿವೇಣಿ ಸಂಗಮ ಮೆದುಳಿನಲ್ಲಿ ನೆನಪಿನ ಬೇರುಗಳನ್ನು ಗಟ್ಟಿಗೊಳಿಸುತ್ತದೆ. ಪ್ರಶ್ನೆ ಕೇಳುವ ಆಸಕ್ತಿಯು ಅಷ್ಟೇ ಮುಖ್ಯ. ಪ್ರಶ್ನೆಯೇ ಕುತೂಹಲದ ಕಿಡಿ, ಉತ್ತರದ ಅನ್ವೇಷಣೆಯೇ ನಿಜವಾದ ಕಲಿಕೆ.**

ಪುಸ್ತಕದ ಸಾಲುಗಳು ಈಗ ಪರದೆಯ ತಿರುವುಗಳಾದವು. ಜ್ಞಾನ ಬೆರಳ ತುದಿಯಲ್ಲಿದೆ. ಆದರೆ ಮಾಹಿತಿಯ ಪ್ರವಾಹದಲ್ಲಿ ಈಜಿ ದಡ ಸೇರುವವನೇ ವಿಜೇತ. ಇಂದಿನ ಗಣಕಯುಗದ ಸವಾಲು ಎಷ್ಟು ಕಲಿತೆ ಎಂಬುದಲ್ಲ, ಹೇಗೆ ಕಲಿತೆ ಎಂಬುದು. ಈ ಜಾಣ್ಮೆಯೇ ಇಪ್ಪತ್ತೊಂದನೇ ಶತಮಾನದ ಅಗತ್ಯ ಕೌಶಲ್ಯ.

ವಿಜ್ಞಾನವೂ ಇದನ್ನು ಸಮರ್ಥಿಸುತ್ತದೆ. ಒಂದೇ ವಿಷಯವನ್ನು ಕಣ್ಣು, ಕಿವಿ ಮತ್ತು ಕೈಯಿಂದ ಕಲಿಯುವಾಗ ಮೆದುಳಿನ ಹಲವು ಭಾಗಗಳು ಒಟ್ಟಿಗೆ ಎಚ್ಚರಗೊಳ್ಳುತ್ತವೆ. ಸಂಶೋಧನೆಗಳ ಪ್ರಕಾರ ಹೀಗೆ ಕಲಿತಾಗ ಸ್ಮರಣೆ ಶೇ.65ರಷ್ಟು ಹೆಚ್ಚುತ್ತದೆ. ಆದರೆ ಗಮನವೇ ಮುಖ್ಯ. ಅನಗತ್ಯ ಸೂಚನೆಗಳನ್ನು ಆಫ್ ಮಾಡಿ, ಸಮಯ ವಿಭಜನಾ ವಿಧಾನದಿಂದ 25 ನಿಮಿಷ ಏಕಾಗ್ರತೆಯಿಂದ ಕಲಿತರೆ ಗಮನಶಕ್ತಿಯೂ ವೃದ್ಧಿಸುತ್ತದೆ.

ಪೋಷಕರೇ, ಶಿಕ್ಷಕರೇ ಗಮನಿಸಿ. ಈ ಕಲೆಯನ್ನು ರೂಢಿಸಿದ ಮಗು ಕೇವಲ ಅಂಕಗಳ ಯಂತ್ರವಲ್ಲ. ಅದು ಸ್ವತಂತ್ರವಾಗಿ ಕಲಿಯುವ ಚಿಂತಕ, ತೀಕ್ಷ್ಣವಾಗಿ ವಿಶ್ಲೇಷಿಸುವ ಸಂಶೋಧಕ,



ಆತ್ಮವಿಶ್ವಾಸದಿಂದ ಸೃಷ್ಟಿಸುವ ಕನಸುಗಾರ. ಗಣಕಯಂತ್ರವನ್ನು ಸರಿಯಾಗಿ ಬಳಸಿದರೆ ಅದು ಗೊಂದಲವಲ್ಲ. ಅದು ನಾಳೆಯನ್ನು ರೂಪಿಸುವ ಅದೃಶ್ಯ ಶಕ್ತಿಯಾಗುತ್ತದೆ.



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

## ಮಾನವನ ನಿಜ ಜೀವನದ ಬದುಕಿಗೆ ಉಪಯುಕ್ತವಾಗುವ ಕೆಲವು ಉಪಯುಕ್ತ ಸಂದೇಶಗಳು

(1) ಕೆಟ್ಟ ಆಲೋಚನೆಗಳು, ಕೆಟ್ಟ ಚಿಂತನೆಗಳು, ಕೆಟ್ಟ ಮನಸ್ಸುಗಳು, ಕೆಟ್ಟ ಬಾಯಿ ಕಣ್ಣು ಕಿವಿಗಳು, ಕೆಟ್ಟ ದೃಷ್ಟಿಗಳು, ಕೆಟ್ಟ ಹೃದಯಗಳು, ಕೆಟ್ಟ ಕೈಗಳು ಮಾತ್ರವೇ ಜೀವನದ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ. (2) ಪರಿಪಕ್ವವಾಗಿರುವ ಬಹುಮುಖ ಪ್ರಜ್ಞೆಯನ್ನು ಒಳಗೊಂಡ ಸರಿಯಾದ ಪೂರ್ಣ ಜ್ಞಾನವೇ ನಮ್ಮ ಎಲ್ಲಾ ಸಮಸ್ಯೆಗಳೆಲ್ಲದಕ್ಕೂ ಅಂತಿಮ ಪರಿಹಾರ. (3) ಸ್ವಾರ್ಥರಹಿತ, ಅಪೇಕ್ಷ ರಹಿತ, ನಿಸ್ವಾರ್ಥ ಸೇವೆ ಮಾತ್ರವೇ ನಮ್ಮ ಎಲ್ಲಾ ಪ್ರಗತಿಗೆ ಮತ್ತು ಶ್ರೇಯಸ್ಸಿಗೆ ಮಾರ್ಗ. (4) ಪ್ರತಿದಿನ ದೇಹ ಮತ್ತು ಮನಸ್ಸಿಗೆ ಉಲ್ಲಾಸವಾಗುವ ಯೋಗ, ಧ್ಯಾನ, ಸತ್ಸಂಗ, ಪ್ರವಚನ ಮತ್ತು ಪ್ರಾರ್ಥನೆಯಿಂದ ಭಗವಂತನಲ್ಲಿ ಐಕ್ಯವಾಗಿ ಉತ್ತಮವಾದ ಹಾಗೂ ಶ್ರೇಷ್ಠ ಮಾನವನಾಗಬಹುದು. (5) ನಮ್ಮ ಮನದಲ್ಲಿ ಮನೆಮಾಡಿಕೊಂಡಿರುವ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮದ, ಮತ್ಸರ ಹಾಗೂ ಅಹಂಕಾರವನ್ನು ತ್ಯಜಿಸಿದ ನಂತರ ಅನಂತದಲ್ಲಿರುವ ಆನಂದವನ್ನು ಅನುಭವಿಸಬಹುದು. (6) ಪ್ರತಿದಿನ ಉನ್ನತವಾದ ಚೈತನ್ಯ, ಚಿಲುಮೆಯಾಗಿ ಕಂಗೊಳಿಸಬೇಕಾದರೆ ಗೋಡೆ ನಿರ್ಮಿಸಿಕೊಂಡು ಸ್ವಾರ್ಥವಾಗಿ ಬದುಕುವ ಬದಲು ಸಂಪರ್ಕದ ಸೇತುವೆಯಾಗಿ ಸಂಬಂಧವನ್ನು ಗಟ್ಟಿಮಾಡಿಕೊಳ್ಳಿ. (7) ಹುಟ್ಟಿನಿಂದ ಕೊನೆಯವರೆಗೂ ಮನುಷ್ಯನಲ್ಲಿ ಶ್ರದ್ಧೆ ಇರಬೇಕು. ದೇವರಿಗೆ ನೈವೇದ್ಯ ಮುಖ್ಯ ಅಲ್ಲ, ಭಕ್ತಿ ತೋರಿಸಬೇಕು ಇವೆರಡಿದ್ದರೆ ದೇವರ ದರ್ಶನವಾಗುತ್ತದೆ. ಶ್ರದ್ಧೆಯಿಂದ ಎಲ್ಲಾ ವಿದ್ಯೆಗಳನ್ನು ಕಲಿತುಕೊಂಡ ಹಾಗೆ ಜೀವನ ಸಾಗಿಸಬೇಕು. (8) ನಮ್ಮಲ್ಲಿ ಸತ್ಯ ಮತ್ತು ಪ್ರಮಾಣಿಕತೆ ಮನೆ ಮಾಡಿಕೊಂಡಿದ್ದರೆ ಯಾವತ್ತೂ ಬೇರೆಯವರಿಗೆ ಅವಕಾಶ ಕೊಡಬೇಡಿ.

ಅದಿಲ್ಲದಿದ್ದರೆ ಯಥಾಪ್ರಕಾರ ನಮ್ಮ ಮೇಲೆ ದಾಳಿ ಹಾಗೂ ಆಕ್ರಮಿಸಿಕೊಳ್ಳುತ್ತಾರೆ.

(9) ದೇವರು ಜಗತ್ತಿನ ಎಲ್ಲರಿಗೂ ಒಂದೇ ಸಮನೆ ಆಶೀರ್ವಾದ ನೀಡಿದ್ದಾರೆ ಆದರೆ ನಾವು ಆಶೀರ್ವಾದ ನೀಡುವಷ್ಟು ಇನ್ನೂ ಮನುಷ್ಯ ಪರಿಪಕ್ವ, ಪರಿಶುದ್ಧ, ಪರಿಪೂರ್ಣ ದೇವರ ಗುಣಗಳನ್ನು ಕಲಿತಿಲ್ಲ ಹಾಗೂ ಬೆಳೆದಿಲ್ಲ ಪ್ರಯತ್ನ ಮುಂದುವರೆದಿದೆ. (10) ಭಗವಂತ ಸರ್ವಶಕ್ತ, ಸರ್ವವ್ಯಾಪಿ ಮತ್ತು ನಮ್ಮ ಎಲ್ಲಾ ಸುತ್ತ ಮುತ್ತ ಕಣ್ಣಿಗೆ ಕಾಣುವ ಹಾಗೂ ಕಾಣದೇ ಇರುವ ಶಕ್ತಿಯೇ ಆ ದೈವಶಕ್ತಿ.

(11) ಸತ್ಯ ಸದಾ ಕಹಿ, ಅದೇ ಸುಳ್ಳು ಸದಾ ಸಿಹಿ. ಸತ್ಯವನ್ನ ಯಥಾರೀತಿ ನೋಡಲು ಆದಷ್ಟು ಎದೆಗಾರಿಕೆ ಬೇಕು ಹಾಗೂ ಸತ್ಯವನ್ನು ಎದುರಿಸುವ ಧೈರ್ಯ-ಸ್ಥೈರ್ಯ, ಭರವಸೆ, ಸಾಮರ್ಥ್ಯ ಹಾಗೂ ಸಮರ್ಥದಿಂದ ಕೂಡಿರಬೇಕು. (12) ದೇಹ ಕಣ್ಣಿಗೆ ಕಾಣಿಸುತ್ತದೆ ಆದರೆ ಮನಸ್ಸು ಮತ್ತು ಆತ್ಮ ಕಾಣುವುದಿಲ್ಲ ಆದ್ದರಿಂದ ಮನಸ್ಸನ್ನು ಉನ್ನತವಾಗಿ ಗ್ರಹಿಸಿ, ನಿಗ್ರಹಿಸಿ ಇಟ್ಟುಕೊಳ್ಳಬೇಕು. (13) ದೇವರು ಮಾಯೆ, ಮಾಯೆಯಿಂದ ಕಳೆದುಹೋಗುವ ದೈವಕ್ಕೆ ಅನುಬಂಧ ವಿರಲಿ ದೇವರು ನಮ್ಮ ಬಳಿಗೆ ಬರುವ ರೀತಿ ನಮ್ಮ ನಡವಳಿಕೆಗಳಲ್ಲಿ ಶುದ್ಧ ಇರಬೇಕು. (14) ನಮ್ಮ ನಮ್ಮ ದೃಷ್ಟಿಕೋನಗಳಿಗೆ ಅನುಗುಣವಾಗಿ ಸರಿಹೊಂದುವ ಜೀವನಶೈಲಿಯನ್ನು ಅನುಭವಿಸಬೇಕು.

ಬೇರೆಯವರ ದೃಷ್ಟಿಕೋನಗಳನ್ನು ನಕಲು ಮಾಡಿ ಅನುಕರಿಸುವುದು ಅದು ಸರಿಯಲ್ಲ. (15) ಸೃಷ್ಟಿಕರ್ತ ದೇವರಿಗೆ ಮೊದಲು ಪ್ರಾಧಾನ್ಯತೆ ಕೊಡಿ. ನಂತರ ಹೆತ್ತವರಿಗೆ, ಗುರುಹಿರಿಯರಿಗೆ, ಕಷ್ಟದಲ್ಲಿ ನೆರವಾದವರಿಗೆ ಪ್ರಾಧಾನ್ಯತೆ ಕೊಟ್ಟು ಗೌರವಿಸಿ. (16) ಕಾಯಾ-ವಾಚಾ -ಮನಸಾ, ಅಂತರಂಗ- ಬಹಿರಂಗ ಶುದ್ಧಿಯಾಗಿ ಒಳ್ಳೆಯರಾಗಿರುವುದೇ ಪ್ರತಿಫಲ. (17) ಆಹ್ಲಾದಕರವಾದ ವುಗಳ ಮೇಲೆ ಹಕ್ಕನ್ನು ಬೆಳೆಸಿಕೊಳ್ಳುವುದು ಶಕ್ತಿಯ ಸಂಕೇತ.

ಶಕ್ತಿಯ ಜೊತೆಗೆ ಯುಕ್ತಿಯು ಸಹ ಇರಬೇಕು. (18) ಪದವಿ, ಅಧಿಕಾರ, ಹಣ, ಅಂತಸ್ತು, ಕಿರೀಟ, ಗೌರವ, ಅಪೇಕ್ಷೆ, ಪ್ರತಿಫಲ ಎಲ್ಲಾ ವ್ಯಾಮೋಹವನ್ನು ತೊರೆದುಬಿಡಿ ಎಲ್ಲರೂ ದೇವರಾಗಿ ಎಲ್ಲರೂ ದೇವರು ತೋರಿಸಿರುವ ದಾರಿ ಮಾರ್ಗದಲ್ಲಿ ಇಂದೇ ಪ್ರತಿಜ್ಞೆ ಮತ್ತು ಸಂಕಲ್ಪ ಮಾಡೋಣ. ಈ ಮೇಲ್ಕಂಡ ಗೀತಾಚಾರ್ಯ ನೀಡಿರುವ ಗೀತಾಸಾರದ ದಾರಿದೀಪೋಕ್ತಿ ಅಂಶಗಳು ಭಗವದ್ಗೀತೆಯ 18 ಅಧ್ಯಾಯಗಳಲ್ಲಿ ಕಾಣಬಹುದು.

## ಮಕ್ಕಳಿಗೆ ಉತ್ತಮ ಮಾದರಿಗಳಾಗಲು ದಾರಿ ತೋರಿಸುವ ರಾಮಾಯಣದ 10 ಅಮೂಲ್ಯ ಪಾಠಗಳು ಸತ್ಯ ಧರ್ಮದ ಪ್ರತೀಕ



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಮಕ್ಕಳೇ ನಮ್ಮ ನಾಳೆಯ ಸಮಾಜದ ಶಕ್ತಿ. ಅವರಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಉತ್ತಮ ಸಂಸ್ಕಾರ, ಮೌಲ್ಯಗಳು ಮತ್ತು ಮಾನವೀಯ ಗುಣಗಳನ್ನು ಬೆಳೆಸುವುದು ಪ್ರತಿಯೊಬ್ಬ ಪೋಷಕರ ಜವಾಬ್ದಾರಿ. ಇಂದಿನ ವೇಗದ ಜೀವನಶೈಲಿ, ತಂತ್ರಜ್ಞಾನದ ಅತಿಯಾದ ಬಳಕೆ ಮತ್ತು ಸ್ಪರ್ಧಾತ್ಮಕ ಮನೋಭಾವದ ನಡುವೆ ಮಕ್ಕಳಿಗೆ ಜೀವನದ ಸರಿಯಾದ ದಾರಿಯನ್ನು ತೋರಿಸುವುದು ಸವಾಲಿನ ಕೆಲಸವಾಗಿದೆ. ಇಂತಹ ಸಂದರ್ಭದಲ್ಲಿ ಭಾರತೀಯ ಪರಂಪರೆಯ ಮಹಾಕಾವ್ಯಗಳು ಮಕ್ಕಳಿಗೆ ಉತ್ತಮ ಜೀವನಮೌಲ್ಯಗಳನ್ನು ಕಲಿಸುವ ಶಕ್ತಿಯುತ ಮಾಧ್ಯಮವಾಗಿವೆ. ರಾಮಾಯಣ ಕೇವಲ ಒಂದು ಪೌರಾಣಿಕ ಕಥೆಯಲ್ಲ ಅದು ಕುಟುಂಬ, ಸ್ನೇಹ, ಕರ್ತವ್ಯ, ತ್ಯಾಗ, ಸತ್ಯ, ಶಿಸ್ತು ಮತ್ತು ಮಾನವೀಯತೆಯಂತಹ ಮೌಲ್ಯಗಳನ್ನು ತಿಳಿಸುವ ಜೀವನದರ್ಶನವಾಗಿದೆ. ರಾಮಾಯಣದ ಪಾತ್ರಗಳು ಮತ್ತು ಘಟನೆಗಳಿಂದ ಮಕ್ಕಳಿಗೆ ಅನೇಕ ಅಮೂಲ್ಯ ಪಾಠಗಳನ್ನು ಕಲಿಸಬಹುದು. 1. **ಸತ್ಯವನ್ನು ಪಾಲಿಸುವುದು:** ಶ್ರೀರಾಮನ ಜೀವನ ಸತ್ಯ ಮತ್ತು ಧರ್ಮದ ಪ್ರತೀಕ. ಯಾವುದೇ ಕಷ್ಟ ಬಂದರೂ ಸತ್ಯದ ಮಾರ್ಗವನ್ನು ಬಿಡಬಾರದು ಎಂಬುದನ್ನು ಮಕ್ಕಳು ಕಲಿಯಬೇಕು.

2. **ತಂದೆ-ತಾಯಿಗೆ ಗೌರವ:** ರಾಮನು ತಂದೆಯ ಮಾತಿಗೆ ಅತ್ಯಂತ ಗೌರವ ನೀಡಿದನು. ಪೋಷಕರನ್ನು ಗೌರವಿಸುವುದು ಕುಟುಂಬದ ಬಲವನ್ನು ಹೆಚ್ಚಿಸುತ್ತದೆ. 3. **ಕರ್ತವ್ಯ ಪ್ರಜ್ಞೆ:** ಪರಿಸ್ಥಿತಿ ಹೇಗೇ ಇದ್ದರೂ ತನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂಬ ಸಂದೇಶ ರಾಮನ ಜೀವನದಿಂದ ಸಿಗುತ್ತದೆ. 4. ಸಹೋದರ ಪ್ರೀತಿ: ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರ ನಡುವಿನ ಬಾಂಧವ್ಯ ಮಕ್ಕಳಿಗೆ ಸಹೋದರ-ಸಹೋದರಿಯರೊಂದಿಗೆ ಪ್ರೀತಿ, ಸಹಕಾರ ಮತ್ತು ತ್ಯಾಗದಿಂದ ಇರಲು ಕಲಿಸುತ್ತದೆ. 5. **ಸ್ನೇಹದ ಮಹತ್ವ:** ರಾಮ ಮತ್ತು ಹನುಮಂತನ ಸ್ನೇಹ ನಂಬಿಕೆ ಮತ್ತು ನಿಸ್ವಾರ್ಥ ಸೇವೆಯ ಅತ್ಯುತ್ತಮ ಉದಾಹರಣೆ. ನಿಜವಾದ ಸ್ನೇಹಿತನು ಕಷ್ಟದ ಸಮಯದಲ್ಲಿ ಜೊತೆ ನಿಲ್ಲುತ್ತಾನೆ. 6. **ವಿನಯ:** ರಾಮನು ಅಪಾರ ಶಕ್ತಿ ಮತ್ತು ಸಾಮರ್ಥ್ಯ ಹೊಂದಿದ್ದರೂ ಎಂದಿಗೂ ಅಹಂಕಾರದಿಂದ ವರ್ತಿಸಲಿಲ್ಲ. ಪ್ರತಿಭೆ ಇದ್ದರೂ ವಿನಯದಿಂದ ಇರಬೇಕು ಎಂಬುದು ಮಕ್ಕಳಿಗೆ ಮುಖ್ಯ ಪಾಠ. 7. **ಹಿರಿಯರಿಗೆ ಗೌರವ:** ರಾಮಾಯಣದ ಹಲವು ಪಾತ್ರಗಳು ಹಿರಿಯರ ಮಾತು, ಅನುಭವ ಮತ್ತು ಮಾರ್ಗದರ್ಶನಕ್ಕೆ ಮಹತ್ವ ನೀಡುತ್ತವೆ. ಮಕ್ಕಳೂ ಹಿರಿಯರ ಅನುಭವದಿಂದ ಕಲಿಯುವ ಗುಣ ಬೆಳೆಸಿಕೊಳ್ಳಬೇಕು. 8. **ಕಷ್ಟಗಳನ್ನು ಧೈರ್ಯದಿಂದ ಎದುರಿಸುವುದು:** ಜೀವನದಲ್ಲಿ ಸಮಸ್ಯೆಗಳು ಬಂದಾಗ ಕುಗ್ಗದೆ ಧೈರ್ಯದಿಂದ ಎದುರಿಸಬೇಕು. ರಾಮನ ವನವಾಸದ ಸಂದರ್ಭ ಮಕ್ಕಳಿಗೆ ಸಹನೆ ಮತ್ತು ಆತ್ಮವಿಶ್ವಾಸದ ಪಾಠ ನೀಡುತ್ತದೆ. 9. **ಇತರರಿಗೆ ಸಹಾಯ ಮಾಡುವ ಮನೋಭಾವ:** ಹನುಮಂತನ ಸೇವಾಭಾವ, ನಿಸ್ವಾರ್ಥತೆ ಮತ್ತು ಸಮರ್ಪಣೆ ಮಕ್ಕಳಲ್ಲಿ ಸಹಾಯ ಮಾಡುವ ಗುಣವನ್ನು ಬೆಳೆಸಲು ಪ್ರೇರಣೆಯಾಗುತ್ತದೆ. 10. **ಧರ್ಮ ಮತ್ತು ಮಾನವೀಯತೆ:** ಜೀವನದಲ್ಲಿ ಯಶಸ್ಸು ಸಾಧಿಸುವುದಕ್ಕಿಂತ ಒಳ್ಳೆಯ ಮನುಷ್ಯನಾಗುವುದು ಮುಖ್ಯ. ಧರ್ಮ, ನ್ಯಾಯ ಮತ್ತು ಮಾನವೀಯತೆಯನ್ನು ಜೀವನದ ಆಧಾರವನ್ನಾಗಿಸಿಕೊಳ್ಳಬೇಕು. ಮಕ್ಕಳಿಗೆ ರಾಮಾಯಣವನ್ನು ಕೇವಲ ಕಥೆಯಾಗಿ ಹೇಳುವುದಕ್ಕಿಂತ ಅದರಲ್ಲಿರುವ ಜೀವನಮೌಲ್ಯಗಳನ್ನು ಅವರ ದೈನಂದಿನ ಬದುಕಿಗೆ ಅಳವಡಿಸುವಂತೆ ಮಾಡಬೇಕು. ಪೋಷಕರು ತಾವು ಮೊದಲು ಈ ಮೌಲ್ಯಗಳನ್ನು ಪಾಲಿಸಿ ಮಕ್ಕಳಿಗೆ ಮಾದರಿಯಾಗಬೇಕು. ಏಕೆಂದರೆ ಮಕ್ಕಳು ನಾವು ಹೇಳುವುದಕ್ಕಿಂತ ನಾವು ಮಾಡುವುದನ್ನು ಹೆಚ್ಚು ಕಲಿಯುತ್ತಾರೆ. ಆದ್ದರಿಂದ ರಾಮಾಯಣದ ಈ ಪಾಠಗಳು ಮಕ್ಕಳ ವ್ಯಕ್ತಿತ್ವ ನಿರ್ಮಾಣಕ್ಕೆ ಉತ್ತಮ ಮಾರ್ಗದರ್ಶಿಯಾಗಬಲ್ಲವು. ಸತ್ಯ, ಪ್ರೀತಿ, ಕರ್ತವ್ಯ, ವಿನಯ, ಧೈರ್ಯ ಮತ್ತು ಮಾನವೀಯತೆಯಂತಹ ಗುಣಗಳನ್ನು ಬಾಲ್ಯದಲ್ಲೇ ಬೆಳೆಸಿದರೆ, ಅವರು ಭವಿಷ್ಯದಲ್ಲಿ ಕುಟುಂಬಕ್ಕೂ ಸಮಾಜಕ್ಕೂ ಹೆಮ್ಮೆಯಾಗುವ ಉತ್ತಮ ನಾಗರಿಕರಾಗುತ್ತಾರೆ.

## ರಾಮಾಯಣ



ಕದನವು ಬೇಡವೆಂದು ವಿಭೀಷಣನು ದಾನವರ ಅರಸನಿಗೆ ತಿಳಿಹೇಳಿದುದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ನಗಜೆ ಕೇಳು, ರಾಕ್ಷಸರೆಲ್ಲರೂ ಕೈಮುಗಿದುಕೊಂಡು ರಾವಣನನ್ನು ಮುದಗೊಳಿಸಲೆಂದು ನಾನಾ ಬಗೆಯ ವೀರವಾಕ್ಯಗಳನ್ನಾಡಿದರು. ಶತ್ರುಬಲವನ್ನು ಅರಿಯದೆ ದುರ್ಮೇಧರು ತಮ್ಮ ಬಲವನ್ನು ನಗೆಗೇಡಾಗುವಂತೆ ಆಲೋಚಿಸುತ್ತ ಅಗಣಿತ ರೀತಿಯಲ್ಲಿ ಉತ್ಪ್ರೇಕ್ಷ ಮಾಡುತ್ತಿದ್ದಾರೆ. ಪರಿಘ ಶಕ್ತಿ ಪಟ್ಟಸ ಶೂಲ ಕರವಾಳ ಶರಚಾಪಗಳನ್ನು ಪಡೆದ ಮಹಾಬಲರು ಎಡಬಲಗಳಲ್ಲಿ ಕೈಕಟ್ಟಿಕೊಂಡು ನಿನ್ನನ್ನು ಓಲೈಸುತ್ತಿದ್ದಾರೆ. ಸುರರು ಮತ್ತು ಅಸುರರ ನೆರವಿಯಲ್ಲಿ ನೀನು ಅಧಿಕನೆನಿಸಿದ್ದೀಯೆ. ಒಮ್ಮೆ ನಾಕಲೋಕವನ್ನು ಜಯಿಸಿ, ಹರನ ಗಿರಿಯನ್ನು ಒಂದೇ ಕೈಯಲ್ಲಿ ಗಿರಗಿರ ತಿರುಗಿಸಿ, ಕುಬೇರನ ಬಲವನ್ನು ಬಗ್ಗುಬಡಿದ ಏಕೈಕ ವೀರ ನೀನು ನಿನಗೆ ಈ ಜಗತ್ತಿನಲ್ಲಿ ಪಾಸಟಿಯಾದವರು ಇದ್ದಾರೆಯೇ, ಅರಸನೇ ಹರಿ ರುದ್ರ ಸೂರ್ಯ ಚಂದ್ರ ಮರುತ ಮುಂತಾದವರು ನಿನ್ನೆದುರು ನಿಂತು ನಿಟ್ಟಿಸಲಾರರು; ಮಯಾಸುರನು ಭಯಗೊಂಡು ನಿನ್ನ ದಯೆಯನ್ನು ಸಂಪಾದಿಸಲೋಸುಗ ತನ್ನ ಮಗಳನ್ನು ನಿನಗೆ ಒಪ್ಪಿಸಿದ; ವಾಸುಗಿ ತಕ್ಷ ಧೃತರಾಷ್ಟ್ರಮುಂತಾದ ಮುಖ್ಯರು ಸಮರಾಂಗಣದಲ್ಲಿ ನಿನಗೆ ಹೆದರಿ ಓಡಿಹೋದುದು ಹುಸಿಯೇ? ಅಗಸ್ತ್ಯನ ಮಕ್ಕಳು ಎಷ್ಟು ಸಾಹಸಪಟ್ಟು ಬಲಗುಂದಿ ಹಿಂಜರಿದರು ಇಂದ್ರಸಮಾನ ರಾಜರು ಎಷ್ಟು ಮಂದಿ ಎದುರು ನಿಂತು ಹೋರಾಡಲಾರದೇ ಪ್ರಾಣಬಿಟ್ಟುದನ್ನು ಯಾರು ತಾನೇ ಅರಿಯರು? ಅಂದಮೇಲೆ ವಾನರಸೈನ್ಯವು ಬಂದು ನಿನ್ನನ್ನು ಏನು ತಾನೇ ಮಾಡಬಲ್ಲುದು ಜೀಯ, ಚಿಂತೆ ಯಾಕೆ? ಹರನಿಂದ ಅನೇಕ ಅಸಮ. ವರಗಳನ್ನು ಪಡೆದು ನಾನಾ ಅಸ್ತ್ರಗಳನ್ನು ಕೈವಶ ಮಾಡಿಕೊಂಡ ಅಮರರನ್ನು ಅಂತಕನಿಗೊಪ್ಪಿಸುವ ರಾವಣನು ಶ್ರೀರಾಮ ಮಕಾ ಸೈನ್ಯವನ್ನು ಯಮನಿಗೆ ಒಪ್ಪಿಸುತ್ತಾನೆ, ನಡುವೆ ಬರುವ ಮಾನವಸೈನ್ಯವನ್ನು ನಿಮಿಷದಲ್ಲಿ ಶಾಂತಗೊಳಿಸುತ್ತಾನೆ. ಹಿಂದು ಮುಂದನ್ನರಿಯದ ಅಜ್ಞಾನಿಗಳು ರಣಭೀತಿಯಿಂದ ಮಾತನಾಡಿಕೊಂಡರೆ ಅದನ್ನು ಮನಸ್ಸಿಗೆ ತಂದುಕೊಳ್ಳಬಾರದು ಎಂದು ಕೆಲವರು ಹೇಳಿದರು. ಅವರಲ್ಲಿ ಪ್ರಹಸ್ತನು, ಇಂದುಧರ ದೇವೇಂದ್ರ, ಗಾಂಧರ್ವರಿಗೆ ನಿನ್ನ ಪರಾಕ್ರಮವು ಅಸದಳವೆಂದ ಮೇಲೆ ಈ ಕಪಿಗಳಿಂದ ಏನು ತಾನೇ ಆದೀತು ನೀನು ಅಸಮನೆಂಬ ವಿಷಯ ಜಗದ್ವಿಖ್ಯಾತವಾದುದಲ್ಲವೇ? ಒಂದು ಕಪಿ ಈ ಮೊದಲು ಬಂದು ವಂಚನೆಯಿಂದ ಎಲ್ಲರನ್ನೂ ದಿಗ್ಭ್ರಮೆಗೊಳಿಸಿದುದನ್ನು ನೆನಪಿಸಿಕೊಂಡು ಅವನು ಮಹಾಶೂರನೆಂಬ ಭಾವನೆ ತಮ್ಮ ಮನಸಿಗೂ ಬಂದಂತಿದೆ. ತಾವು ಅಪ್ಪಣೆಯನ್ನಿತ್ತರೆ ಸಮುದ್ರದವರೆಗಿನ ಪ್ರದೇಶದಲ್ಲಿರುವ ಕಪಿಸಮೂಹವನ್ನು ಸದೆಬಡಿದು ಬಂದು ತಮ್ಮಲ್ಲಿ ಬರುತ್ತೇನೆ ಎಂದ. ಅಷ್ಟರಲ್ಲಿ ಅತೀವ ಕೋಪದಿಂದ ತುಂಬಿದ ದುರ್ಮುಖನು ಹೀಗೆ ಹೇಳಿದ "ಮೋಸದಿಂದ ಕಪಿಯು ಮಾಡಿದ ಕೆಲಸವನ್ನು ಮನಸಿನಲ್ಲಿಟ್ಟುಕೊಳ್ಳದೆ ನನಗೆ ನಿರೂಪವನ್ನಿತ್ತರೆ ಕಪಿಸೈನ್ಯವನ್ನು ಒಂದು ಬಾಣದಿಂದಲೇ ನಿರ್ನಾಮ ಮಾಡಿ ಬೀಡುತ್ತೇನೆ. ಇದರಲ್ಲಿ ಸಂದೇಹವಿಲ್ಲ ಎಂದು ಹೇಳಲು, ವಜ್ರದಂಷ್ಟನು ಕೋಪಾವೇಶದಿಂದ ದನುಜಪತಿಯನ್ನು ಕುರಿತು, ಶತ್ರುವಿನ ಬಲವೇನೆಂದು ಯೋಚಿಸದೆ ನಾನು ಲಕ್ಷ್ಮಣ ಸುಗ್ರೀವ ಮುಂತಾದವರ ಸಹಿತ ಕಾತುತ್ತ ನನ್ನು ಕೊಂದು ಕಪಿಸೇನೆಯನ್ನು ತರಿದು ಬರುತ್ತೇನೆ. ಹಿಂದೆ ಕೋಡಗವೊಂದು ನಮ್ಮನ್ನು ವಂಚಿಸಿದ ಪರಿಯನ್ನು ಕುರಿತು ಯೋಚಿಸುವುದರಿಂದೇನು ಫಲ ಮತ್ತೊಂದು ಬಗೆಯ ಉಪಾಯ ನನಗೆ ಹೊಳೆಯುತ್ತಿದೆ, ಅದನ್ನೀಗ ಬಿನ್ನವಿಸುತ್ತೇನೆ, ಮನಸ್ಸಿಟ್ಟು ಕೇಳಿ ಯಾವಯಾವುದೋ ಉಪಾಯದಿಂದ ಅರಿಕುಲವನ್ನು ನಾಶಮಾಡುವುದು ಅಸಾಧ್ಯ, ಅಂತಹ ಆಲೋಚನೆಯನ್ನು ಬಿಟ್ಟು, ವಿಭಾವಸುವಿನ ಮಗನಂತಹ ರಕ್ಕಸರಲ್ಲಿ ಕಾಮರೂಪ ಧರಿಸಬಲ್ಲ ಕೆಲವರು ಮಹಾ ಕೋವಿದರನ್ನು ಕಳಿಸಿದರೆ ಅವರು ಮಾನವ ರೂಪವನ್ನು ತಾಳಿ ರಾಜನೊಡನೆ ಮಾತನಾಡುವ ರೀತಿಯಲ್ಲಿ ಹೋಗಿ, ಬೇಕಾದಷ್ಟು ಕರಿತುರಗ ಕಾಲಾಳುಗಳನ್ನು ಸಂಗ್ರಹಿಸಿಕೊಂಡು ಬರುವೆನೆಂದು ಬಿನ್ನಪಗೈದು ನಮ್ಮನ್ನು ಈ ಕಾರ್ಯಸಾಧನೆಗೆಂದು ಭರತನು ಕಳಿಸಿದ್ದಾನೆ ಎಂದು ಹೇಳಿದರೆ ಎಲ್ಲರೂ ಮರುಳುಗಳಂತೆ ನಂಬಿಬಿಡುತ್ತಾರೆ . ಇವರು ಒಂದು ಕಡೆ ಉಳಿದುಕೊಂಡಿದ್ದು ರಾತ್ರಿಯ ವೇಳೆ ಬಿಲ್ಲುಬಾಣ ಕತ್ತಿಗಳಿಂದ ಅವರ ಸೈನ್ಯವನ್ನೆಲ್ಲ ಸವರಿ, ರಾಮಲಕ್ಷ್ಮಣರೆಂಬ ಇಬ್ಬರು ನರರನ್ನು ಕೊಂದು ಬರುವಂತೆ ಮಾಡುವ ಒಂದು ಉಪಾಯವು ನನಗೆ ಹೊಳೆಯುತ್ತಿದೆ ಎಂದು ಹೇಳಿ ನಿಲ್ಲಿಸುವಷ್ಟರಲ್ಲಿ ಕುಂಭನು ಕೋಪಾವಿಷ್ಟನಾಗಿ, ರಕ್ಕಸರರಸನೇ, ಬಂಧುರ ಪರಾಕ್ರಮಿಯಂತೆ ನಾನೊಬ್ಬನೇ ಈ ಕ್ಷಣದಲ್ಲಿ ಹೋಗಿ ಆ ಮಂದಮತಿಯಾದ ರಾಮ ಸೌಮಿತ್ರಿ ಮತ್ತು ಮರುತಸುತನೂ ಸೇರಿದಂತೆ ಕಪಿಗಳನ್ನೆಲ್ಲ ಈಡಾಡಿಕೊಂಡು ಬರುತ್ತೇನೆ ಎಂದ. ಆಗ ವಜ್ರಹನು ಕೋಪಭರಿತನಾಗಿ ರಾವಣನನ್ನು ಕುರಿತು ಹೀಗೆಂದ ಮನುಜರೂ ವಾನರರೂ ಗಣನೆ ಮಾಡಬೇಕಾದವರು ಎಂದು ಮತಿವಿಕಲರಂತೆ ಭಾವಿಸುವುದೇಕೆ ಮಹಾರಾಜ, ನೀವು ಧಾರಿಣೀತನೂಜೆಯೊಡನೆ ಸುಖವಾಗಿರಿ, ನಾನೊಬ್ಬನೇ ಹೋಗಿ ವಾನರಬಲವನ್ನೆಲ್ಲ ತಿಂದು ಹಾಕುತ್ತೇನೆ.

ಮುಂದುವರೆಯುವುದು



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

**ಕನ್ನಡದ ಸಾಹಿತ್ಯಕ್ಕೆ ಹೊಸ ಸ್ವರೂಪವನ್ನು ನೀಡಿ ಅದರ ಮುಂದಿನ ಬೆಳವಣಿಗೆಗೆ ದಾರಿತೋರಿ ಕೊಟ್ಟು ನವ್ಯಕಾವ್ಯದ ಪ್ರವರ್ತಕರು ಎಂದು ಗುರುತಿಸಲ್ಪಟ್ಟವರು**

## ಭಾರತೀಯ ಜ್ಞಾನಪೀಠ ಪ್ರಶಸ್ತಿ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಡಾ:ವಿ ಕೆ ಗೋಕಾಕ್‌ರವರ 117ನೇ ವರ್ಷದ ಜನ್ಮಜಯಂತಿ

ಡಾ.ವಿ ಕೆ ಗೋಕಾಕ್ ರವರು 1909 ಆಗಸ್ಟ್ 09 ರಂದು ಧಾರವಾಡ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ತಂದೆ ಕೃಷ್ಣರಾವ್, ತಾಯಿ ಸುಂದರಬಾಯಿ. ಗೋಕಾಕರು ಗುಣಮಟ್ಟದ ಶಿಕ್ಷಣವನ್ನು ದೇಶ-ವಿದೇಶಗಳಲ್ಲಿ ಪಡೆದು ಶಿಕ್ಷಣ ಶ್ರೀಮಂತರಾಗಿ ಶಿಕ್ಷಣ ಕ್ಷೇತ್ರದಲ್ಲಿ ಹಲವು ಹುದ್ದೆಗಳಲ್ಲಿ ಗಣನೀಯ ಸೇವೆಯನ್ನು ಮಾಡಿದವರ ಪೈಕಿ ಒಬ್ಬರಾಗಿರುತ್ತಾರೆ.

ಗೋಕಾಕರು ಬಹುಮುಖ ಪ್ರತಿಭಾವಂತರಾಗಿದ್ದು, ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಕಲೋಪಾಸಕ ಪಯಣ, ಸಮುದ್ರಗೀತೆಗಳು, ತ್ರಿವಿಕ್ರಮರ ಆಕಾಶ ಗಂಗೆ, ನವ್ಯ ಕವಿತೆಗಳು, ಬಾಳ ದೇಗುಲದಲ್ಲಿ, ದ್ಯಾವಾಪೃಥಿವಿ, ಕಾಶ್ಮೀರ ಚಿಂತನ ಮೊದಲಾದ ಕವನ ಸಂಕಲಗಳನ್ನು ರಚಿಸಿದ್ದಾರೆ. ಜನನಾಯಕ, ವಿಮರ್ಶಕ ವೈದ್ಯ, ಯುಗಾಂತರ, ಮುನಿದ ಮಾರಿ ಎಂಬ ನಾಟಕಗಳನ್ನು ರಚಿಸಿದ್ದಾರೆ. .ಕನ್ನಡ ಸಾಹಿತ್ಯದ ಕಾವ್ಯ, ನಾಟಕ, ಕಾದಂಬರಿ, ಪ್ರವಾಸ ಕಥನ, ಜೀವನ ಚರಿತ್ರೆ ಈ ಎಲ್ಲಾ ಪ್ರಕಾರಗಳಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಗೋಕಾಕರು ಕನ್ನಡ ಮತ್ತು ಇಂಗ್ಲಿಷ್ ಭಾಷೆ ಎರಡರಲ್ಲಿಯೂ ಪಾಂಡಿತ್ಯಗಳಿಸಿ ಕೃತಿ ರಚನೆ ಮಾಡಿದ ಅನನ್ಯ ಲೇಖಕರು.

ಕರ್ನಾಟಕದಲ್ಲಿ ಗೋಕಾಕರು ಮನೆಮಾತಾಗಿದ್ದು ಅವರು ಕರ್ನಾಟಕದಲ್ಲಿ ಕನ್ನಡದ ಸ್ಥಾನಮಾನಗಳ ಬಗ್ಗೆ ನೀಡಿದ ಮಹತ್ವದ ವರದಿ ಗೋಕಾಕ್ ವರದಿ ಎಂದು ಪ್ರಸಿದ್ಧವಾದ ಕಾರಣಕ್ಕಾಗಿ ಕನ್ನಡದ ಶ್ರೇಷ್ಠತೆಯನ್ನು ಅದರ ಹಿರಿಮೆಯನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾರಿ ಅದಕ್ಕೆ ವಿಶ್ವಖ್ಯಾತಿಯನ್ನು ತಂದುಕೊಟ್ಟ ಕೀರ್ತಿ ಅವರದಾಗಿದೆ. ಕನ್ನಡ ಸಾಹಿತ್ಯಲೋಕಕ್ಕೆ ಅಪೂರ್ವ ಕೃತಿಗಳನ್ನು ನೀಡಿದ ಅನನ್ಯ ಪ್ರತಿಭಾವಂತ ಲೇಖಕರಾದ ಗೋಕಾಕರಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ಮುಖ್ಯವಾದವು ಭಾರತ ಸಿಂಧು ರಶ್ಮಿ



ಎಂಬ ಮಹಾಕಾವ್ಯಕ್ಕೆ ಜಾನಪೀಠ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದು, ಅಮೇರಿಕೆಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿತು ಹಾಗೂ ಇನ್ನೂ ಹಲವಾರು ಪ್ರಶಸ್ತಿಗಳು ದೊರೆತಿವೆ. ವಿಕೆ ಗೋಕಾಕ್ ರವರು ಕನ್ನಡ ಸಾಹಿತ್ಯ ಆಕಾಶದಲ್ಲಿ ಉಜ್ವಲ ನಕ್ಷತ್ರವಾಗಿ ಪ್ರಕಾಶಿಸುತ್ತಿರುವ ಅನನ್ಯ ಕವಿ, ನಾಟಕಕಾರ, ಕಾದಂಬರಿಕಾರ, ವಿಮರ್ಶಕರಾಗಿದ್ದರು.

ವಿಕೆ ಗೋಕಾಕ್ ರವರು ತನ್ನ 83 ನೇ ವಯಸ್ಸಿನಲ್ಲಿ ಅಂದರೆ 1992 ಏಪ್ರಿಲ್ 28 ರಂದು ವಯೋಸಹಜದಿಂದ ಸ್ವರ್ಗಸ್ಥರಾದರು.

ಡಾ.ವಿಕೆ ಗೋಕಾಕ್ ರವರ 117ನೇ ವರ್ಷದ ಜನ್ಮ ದಿನವಾದ ಇಂದು ಅವರ ಜನ್ಮದಿನಾಚರಣೆಯ ಪ್ರಯುಕ್ತ ಕನ್ನಡ ಸಾಹಿತ್ಯ ಹಿರಿಯ ಚೇತನರವರನ್ನು ಕನ್ನಡ ಮನಸ್ಸುಳ್ಳ ನಾವೆಲ್ಲರೂ ಅವರನ್ನು ಸ್ಮರಿಸಿ, ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರೆಯಲೆಂದು ಕನ್ನಡ ಸಾಹಿತ್ಯಲೋಕದ ಪರಿವಾರರ ಪರವಾಗಿ ಕಣ್ಣಿಗೆ ಕಾಣದ ಕಲ್ಪನೆಯ ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

## ಕೈ ಹಾಗೂ ಕಾಲುಗಳಲ್ಲಿ ಮರಗಟ್ಟುವಿಕೆ ಇಲ್ಲವೇ ಜುಮ್ಮೆನಿಸುವಿಕೆ ಕಾಣಿಸಿದರೆ ಈ ಕಾಯಿಲೆ ಲಕ್ಷಣವಿರಬಹುದು: ತಜ್ಞರು ತಿಳಿಸುವುದೇನು?

ಬೆಳಗ್ಗೆ ಎದ್ದ ನಂತರ ನಿಮ್ಮ ಕೈ ಹಾಗೂ ಕಾಲುಗಳಲ್ಲಿ ಮರಗಟ್ಟುವಿಕೆ ಇಲ್ಲವೇ ಜುಮ್ಮೆನಿಸುವಿಕೆ ಸಂವೇದನೆಯನ್ನು ಅನುಭವಿಸಿದರೆ ಇದನ್ನು ಜನರು ಸಣ್ಣ ಅಥವಾ ಸಾಮಾನ್ಯ ಘಟನೆ ಎಂದು ಪರಿಗಣಿಸಿ ಹೆಚ್ಚಾಗಿ ಈ ಸಮಸ್ಯೆಯನ್ನು ನಿರ್ಲಕ್ಷಿಸುತ್ತಾರೆ. ಯಾವಾಗಲೂ ಕಾಳಜಿಗೆ ಕಾರಣವಲ್ಲದಿದ್ದರೂ ಸಮಸ್ಯೆ ಆಗಾಗ್ಗೆ ಮರುಕಳಿಸಿದರೆ, ದೀರ್ಘಕಾಲದವರೆಗೆ ಮುಂದುವರಿದರೆ ಈ ಕುರಿತು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಕ್ಷುಲ್ಲಕ ಸಮಸ್ಯೆಯಾಗಿ ಕಂಡುಬರುವುದು ವಾಸ್ತವವಾಗಿ ಆರೋಗ್ಯ ಸಮಸ್ಯೆಯ ಸಂಕೇತವಾಗಿರಬಹುದು.

ಕೈ ಮತ್ತು ಕಾಲುಗಳಲ್ಲಿ ಮರಗಟ್ಟುವಿಕೆ ಅಥವಾ ಜುಮ್ಮೆನಿಸುವಿಕೆಯ ಸಂವೇದನೆಯನ್ನು ವೈದ್ಯಕೀಯ ಪರಿಭಾಷೆಯಲ್ಲಿ ಪ್ಯಾರೆಸ್ಟೇಷಿಯಾ ಎಂದು ಕರೆಯಲಾಗುತ್ತದೆ. ಚರ್ಮ, ಕೈಕಾಲುಗಳಿಗೆ ಸಂವೇದನೆಗಳನ್ನು ರವಾನಿಸಲು ಕಾರಣವಾದ ನರಗಳು ಯಾವುದೇ ಕಾರಣಕ್ಕಾಗಿ ಒತ್ತಡಕ್ಕೆ ಒಳಗಾದಾಗ ಈ ಸಮಸ್ಯೆ ಉದ್ಭವಿಸಬಹುದು. ಹೆಚ್ಚಾಗಿ ಈ ಸಮಸ್ಯೆಯು ದೀರ್ಘಕಾಲದವರೆಗೆ ಅನುಚಿತ ಭಂಗಿಯನ್ನು ಕಾಪಾಡಿಕೊಳ್ಳುವುದರಿಂದ ಇಲ್ಲವೇ ಕಾಲುಗಳನ್ನು ಅಡ್ಡಲಾಗಿ ಕುಳಿತುಕೊಳ್ಳುವುದರಿಂದ ಉಂಟಾಗಬಹುದು. ಅಂತಹ ಸಂದರ್ಭಗಳಲ್ಲಿ ಒತ್ತಡ ಕಡಿಮೆಯಾದ ಬಳಿಕ, ರಕ್ತದ ಹರಿವು ಹಾಗೂ ನರಗಳ ಕಾರ್ಯವು ಸಾಮಾನ್ಯ ಸ್ಥಿತಿಗೆ ಮರಳುತ್ತದೆ, ಸಮಸ್ಯೆಯನ್ನು ತನ್ನಿಂದ ತಾನೆ ಸರಿ ಮಾಡಿಕೊಳ್ಳುತ್ತದೆ.

ನೀವು ಸ್ಪಷ್ಟ ಕಾರಣವಿಲ್ಲದೇ ಆಗಾಗ್ಗೆ ಮರಗಟ್ಟುವಿಕೆ, ನಿರಂತರ ಜುಮ್ಮೆನಿಸುವಿಕೆ ಅನುಭವಿಸಿದರೆ ಇಲ್ಲವೇ ದೇಹದ ಒಂದು ಭಾಗದಲ್ಲಿ ಮಾತ್ರ ಹಠಾತ್ ಮರಗಟ್ಟುವಿಕೆ ಸಂಭವಿಸಿದರೆ, ತಕ್ಷಣ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಬೇಕಾಗುತ್ತದೆ. ಈ ಸ್ಥಿತಿಯು ಯಾವಾಗ ಗಂಭೀರ ಆರೋಗ್ಯದ ಅಪಾಯವನ್ನು ಸೂಚಿಸುತ್ತದೆ ಎಂಬುದನ್ನು ತಿಳಿದುಕೊಳ್ಳೋಣ. ಕೈಗಳು ಹಾಗೂ ಪಾದಗಳಲ್ಲಿ ಮರಗಟ್ಟುವಿಕೆ ಸಾಮಾನ್ಯವಾಗಿ ದೇಹದ ಬಾಹ್ಯ ನರಮಂಡಲ, ಬೆನ್ನುಹುರಿ, ಮೆದುಳಿಗೆ ಸಂಪರ್ಕಗೊಂಡಿರುವ ನರ ಮಾರ್ಗಗಳಲ್ಲಿನ ಅಡಚಣೆಯಿಂದ ಉಂಟಾಗುತ್ತದೆ. ನರಗಳು ಸಂಕುಚಿತಗೊಂಡಾಗ, ಇವುಗಳ ರಕ್ತ ಪೂರೈಕೆ ತಾತ್ಕಾಲಿಕವಾಗಿ ಕಡಿಮೆಯಾದಾಗ, ಸಂಕೇತಗಳು ಮೆದುಳನ್ನು ಪರಿಣಾಮಕಾರಿಯಾಗಿ ತಲುಪಲು ವಿಫಲವಾಗುತ್ತವೆ. ಇದರಿಂದ ಕೈ ಹಾಗೂ ಪಾದಗಳು ಮರಗಟ್ಟುವಿಕೆ ಅನುಭವಿಸುತ್ತವೆ. ಹೆಚ್ಚಿನ ಸಂದರ್ಭಗಳಲ್ಲಿ ಕೆಲವೇ ನಿಮಿಷಗಳಲ್ಲಿ ಪರಿಹರಿಸುತ್ತದೆ. ಈ ಸಮಸ್ಯೆ ಮುಂದುವರಿದರೆ ನರ ಹಾನಿಯನ್ನು ಸೂಚಿಸುತ್ತದೆ ಎಂದು ವೈದ್ಯರು ವಿವರಿಸುತ್ತಾರೆ. ಅಮೇರಿಕನ್ ಅಕಾಡೆಮಿ ಆಫ್ ನ್ಯೂರಾಲಜಿ ತಿಳಿಸುವ ಪ್ರಕಾರ, ಮರಗಟ್ಟುವಿಕೆ ಆಗಾಗ್ಗೆ ಸಂಭವಿಸಿದರೆ ಅಥವಾ ಹಂತಹಂತವಾಗಿ ಹದಗೆಟ್ಟರೆ ವೈದ್ಯಕೀಯ ಮೌಲ್ಯಮಾಪನ ಅಗತ್ಯವಾಗಿದೆ. ಕೆಲವೊಮ್ಮೆ ಇದು ಗಂಭೀರವಾದ ಆಧಾರವಾಗಿರುವ ಸ್ಥಿತಿಯಿಂದ ಉಂಟಾಗಬಹುದು. ಕೈಗಳು ಅಥವಾ ಪಾದಗಳಲ್ಲಿ ಮರಗಟ್ಟುವಿಕೆ ಯಾವಾಗಲೂ ಅನಾರೋಗ್ಯದ ಸಂಕೇತವಲ್ಲ. ಸಾಮಾನ್ಯವಾಗಿ ಈ ಸಮಸ್ಯೆ ನರಗಳ ಮೇಲಿನ ಒತ್ತಡದಿಂದ ಉದ್ಭವಿಸುತ್ತದೆ. ದೀರ್ಘಕಾಲ ಒಂದೇ ಸ್ಥಾನದಲ್ಲಿ ಕುಳಿತ ನಂತರ, ಕಾಲುಗಳನ್ನು ಅಡ್ಡಲಾಗಿ ಇಟ್ಟುಕೊಂಡು ಕುಳಿತ ನಂತರ ಅಥವಾ ತಲೆಯ ಕೆಳಗೆ ತೋಳಿನೊಂದಿಗೆ ಮಲಗಿದ ನಂತರ ಈ ಸಮಸ್ಯೆಯನ್ನು ಅನುಭವಿಸಬಹುದು. ಈ ಸ್ಥಾನಗಳು ನರಗಳು ಹಾಗೂ ರಕ್ತನಾಳಗಳ ಮೇಲೆ ಒತ್ತಡ ಉಂಟು ಮಾಡುತ್ತವೆ ಹಾಗೂ ತಾತ್ಕಾಲಿಕವಾಗಿ ಸಂವೇದನೆ ಕಡಿಮೆ ಮಾಡುತ್ತದೆ. ನಿಮ್ಮ ಸ್ಥಾನವನ್ನು ಬದಲಾಯಿಸಿದ ನಂತರ ಹಾಗೂ ಒತ್ತಡ ಕಡಿಮೆಯಾದ ನಂತರ, ರಕ್ತ ಪರಿಚಲನೆ ಸಾಮಾನ್ಯ ಸ್ಥಿತಿಗೆ ಮರಳುತ್ತದೆ, ಕೆಲವು ನಿಮಿಷಗಳಲ್ಲಿ ಜುಮ್ಮೆನಿಸುವಿಕೆ ಹಾಗೂ ಮರಗಟ್ಟುವಿಕೆ ಕಣ್ಮರೆಯಾಗುತ್ತದೆ. ಇದನ್ನು ಸಾಮಾನ್ಯ ದೈಹಿಕ ಪ್ರತಿಕ್ರಿಯೆ ಎಂದು ಪರಿಗಣಿಸಲಾಗುತ್ತದೆ, ಸಾಮಾನ್ಯವಾಗಿ ಯಾವುದೇ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿಲ್ಲ ಎಂದು ಆರೋಗ್ಯ ತಜ್ಞರು ತಿಳಿಸುತ್ತಾರೆ. ಕೈಗಳು ಅಥವಾ ಪಾದಗಳಲ್ಲಿ ಮರಗಟ್ಟುವಿಕೆ ಇದ್ದಕ್ಕಿದ್ದಂತೆ ಪ್ರಾರಂಭವಾದರೆ, ದೀರ್ಘಕಾಲದವರೆಗೆ ಮುಂದುವರಿದರೆ ಅಥವಾ ಇತರ ನರವೈಜ್ಞಾನಿಕ ಲಕ್ಷಣಗಳೊಂದಿಗೆ ಇದ್ದರೆ ಅದನ್ನು ಗಂಭೀರವೆಂದು ಪರಿಗಣಿಸಲಾಗುತ್ತದೆ. ದೇಹದ ಒಂದು ಬದಿಯಲ್ಲಿ ಮಾತ್ರ ಕೈ ಹಾಗೂ ಪಾದದಲ್ಲಿ ಹಠಾತ್ ಮರಗಟ್ಟುವಿಕೆ ಇದ್ದರೆ, ಮಾತನಾಡಲು ತೊಂದರೆ, ದೃಷ್ಟಿ ಸಮಸ್ಯೆಗಳು ಇಲ್ಲವೇ ಸಮತೋಲನ ನಷ್ಟದೊಂದಿಗೆ ಇದ್ದರೆ, ಅದು ಪಾರ್ಶ್ವವಾಯುವಿನ ಸಂಕೇತವಾಗಿರಬಹುದು. ಇಂತಹ ಪರಿಸ್ಥಿತಿಯಲ್ಲಿ ಪಾರ್ಶ್ವವಾಯುವಿನ ಸಮಯದಲ್ಲಿ ಪ್ರತಿ ನಿಮಿಷವೂ ಎಣಿಕೆಯಾಗುವಂತೆ, ತಕ್ಷಣದ ತುರ್ತು ವೈದ್ಯಕೀಯ ಸಹಾಯ ಪಡೆಯುವುದು ತುಂಬಾ ಮುಖ್ಯವಾಗುತ್ತದೆ. ಮರಗಟ್ಟುವಿಕೆ ಸ್ನಾಯು ದೌರ್ಬಲ್ಯ, ನಡೆಯಲು ತೊಂದರೆ ಇಲ್ಲವೇ ತೀವ್ರವಾದ ಕುತ್ತಿಗೆ ಹಾಗೂ ಬೆನ್ನು ನೋವಿನೊಂದಿಗೆ ಇದ್ದರೆ, ಬೆನ್ನುಹುರಿ, ನರಗಳು ಹಾಗೂ ಮೆದುಳಿಗೆ ಸಂಬಂಧಿಸಿದ ಗಂಭೀರ ಸಮಸ್ಯೆಯನ್ನು ಸೂಚಿಸುತ್ತದೆ. ಮಧುಮೇಹ ಹೊಂದಿರುವ ವ್ಯಕ್ತಿಯು ತಮ್ಮ ಕೈ ಮತ್ತು ಕಾಲುಗಳಲ್ಲಿ ನಿರಂತರ ಮರಗಟ್ಟುವಿಕೆಯನ್ನು ಅನುಭವಿಸಿದರೆ, ಇದನ್ನು ಮಧುಮೇಹ ನರರೋಗದ ಲಕ್ಷಣವಾಗಿರಬಹುದು.

